ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 116 RNI Number : KNKAN/25/A2770 05-05-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :116 ರಾಯಚೂರು 05-05-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಮೊದಲ ಚುನಾವಣೆಯಲ್ಲೇ ಗೆದ್ದು ಬೀಗಿದ ಕಾಂಗ್ರೆಸ್‌ನ ಉಮೇಶ್ ಮೇಟಿ



ಬಾಗಲಕೋಟೆ, ಮೇ 04: ಹೆಚ್.ವೈ. ಮೇಟಿ ಅವರ ನಿಧನದಿಂದ ತೆರವಾಗಿದ್ದ ಬಾಗಲಕೋಟೆ () ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಗೆಲುವಿನ ನಗೆ ಬೀರಿದ್ದಾರೆ. ಆ ಮೂಲಕ ಕ್ಷೇತ್ರವನ್ನು ಮರಳಿ ಕಾಂಗ್ರೆಸ್ ತನ್ನ ತೆಕ್ಕೆಗೆ ಪಡೆದುಕೊಂಡಿದೆ. ಬಿಜೆಪಿ ಅಭ್ಯರ್ಥಿಯಾಗಿದ್ದ ವೀರಣ್ಣ ಚರಂತಿಮಠ ಪೈಪೋಟಿ ನೀಡಿದ್ದರಾದರೂ ಅಂತಿಮವಾಗಿ ಸೋಲುಂಡಿದ್ದಾರೆ. ಹೆಚ್.ವೈ. ಮೇಟಿ ನಿಧನದ ಹಿನ್ನೆಲೆ ಅವರ ಕುಟುಂಬಕ್ಕೇ ಟಿಕೆಟ್ ನೀಡಲು ನಿರ್ಧರಿಸಿದ್ದ ಕಾಂಗ್ರೆಸ್, ಮೇಟಿ ಪುತ್ರ ಉಮೇಶ್‌ರನ್ನು ಮೊದಲ ಬಾರಿ ಚುನಾವಣೆಗೆ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಸಿತ್ತು. ಎಷ್ಟು ಮತಗಳ ಅಂತದರದಲ್ಲಿ ಸ್ಪರ್ಧಿಸಿದ್ದ ಉಮೇಶ್ ಮೇಟಿ ಜಯ? ಅಂತಿಮವಾಗಿ ಗೆದ್ದು ಬೀಗಿದ್ದಾರೆ. ಬಿಜೆಪಿಯ ವೀರಣ್ಣ ಚರಂತಿಮಠ್‌ಗೆ ಒಟ್ಟು 76,075 ಮತಗಳು ಬಿದ್ದಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೆಟಿ ಪರ 97,941 ವೋಟ್ ಚಲಾವಣೆ ಆಗಿದ್ದವು. ಹೀಗಾಗಿ 21,866 ಮತಗಳ ಅಂತರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಜಯಭೇರಿ ಬಾರಿಸಿದ್ದಾರೆ.

ದಾಖಲೆ ಬರೆದ ಉಮೇಶ್ ಮೇಟಿ

ಇನ್ನು ಗೆಲುವಿನ ಅಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಹೊಸ ದಾಖಲೆ ಬರೆದಿದ್ದಾರೆ. ಹಿಂದಿನ ಚುನಾವಣೆಗಳಲ್ಲಿ ಬಾಗಲಕೋಟೆ ಕ್ಷೇತದಲ್ಲಿ ಆಭ್ಯರ್ಥಿಗಳು ಪಡೆದಿದ್ದ ಲೀಡ್

ಮೂರನೇಯ ಪುಟಕ್ಕೆ

ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ



ಬೆಂಗಳೂರು, ಮೇ 4- ಪಂಚ ರಾಜ್ಯಗಳ ಚುನಾವಣೆಗಳ ಪೈಕಿ ಪಶ್ಚಿಮ ಬಂಗಾಳ ತಮಿಳುನಾಡಿನಲ್ಲಿ ಆಡಳಿತ ವಿರೋಧಿ ಕೆಲಸ ನಡೆದಿದೆ. ಕೇರಳದಲ್ಲಿ ಕಾಂಗ್ರೆಸ್ ನಿರೀಕ್ಷೆ ಮೀರಿ ಗೆಲುವು ಕಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಜನ ದಿನದ ಅಂಗವಾಗಿ ವಿಧಾನಸೌಧದ ಮುಂದಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜ್ಯದ ಎರಡು ವಿಧಾನಸಭೆಯ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಲಿದೆ. ನಮದೇ ಕಾರಣಗಳಿಂದಾಗಿ ದಾವಣಗೆರೆ ದಕ್ಷಿಣದಲ್ಲಿ ನಮಗೆ ಸ್ವಲ್ಪ ಹಿನ್ನಡೆಯಾಗುತ್ತಿದೆ. ಬಾಗಲಕೋಟೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಇದೆ ಎಂದರು.

ದೇಶದ ಪಂಚ ರಾಜ್ಯಗಳ ಚುನಾವಣಾ ಪೈಕಿ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಸಾಮರ್ಥ್ಯ ಕಡಿಮೆ ಇದ್ದು, ಅಸ್ಸಾಂನಲ್ಲಿ ನಿರೀಕ್ಷಿತ ಫಲಿತಾಂಶ ಬಂದಿದೆ. ಜನರ ತೀರ್ಪನ್ನು ಒಪ್ಪಿಕೊಳ್ಳುತ್ತೇವೆ. ಕೇರಳದಲ್ಲಿ 75 ರಿಂದ 80 ಸ್ಥಾನ ಗೆಲ್ಲಬಹುದು ಎಂದು ಕೊಂಡಿದ್ದೆವು. ಅದನ್ನು ಮೀರಿ 95 ಕಡೆ ಗೆಲ್ಲುತ್ತಿದ್ದೇವೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಮತ್ತು ತಮಿಳುನಾಡಿನಲ್ಲಿ ಆಡಳಿತ ವಿರೋಧಿ ಅಲೆ ಫಲಿತಾಂಶದ ಮೇಲೆ ಪರಿಣಾಮ ಬೀರಿರಬಹುದು ಎಂದರು.ತಮಿಳುನಾಡಿನಲ್ಲಿ ಗೆಲುವಿನತ್ತ ಧಾವಿಸಿರುವ ನಟ ಹಾಗೂ ಟಿವಿಕೆ ಪಕ್ಷದ ಮುಖಂಡ ವಿಜಯ್ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಸಿದ್ದರಾಮಯ್ಯ ಹೇಳಿದರು.

ಮಾಜಿ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಜನ ದಿನಾಚರಣೆಯನ್ನು ಸರ್ಕಾರದ ವತಿಯಿಂದ ಆಚರಿಸಲಾಗುತ್ತಿದೆ. ಸ್ವತಂತ್ರ್ಯ ನಂತರ ಮೊದಲ ಮುಖ್ಯಮಂತ್ರಿಯಾಗಿ 5 ವರ್ಷ ಅಧಿಕಾರ ನಡೆಸಿದ್ದರು. ಸಂವಿಧಾನ ಜಾರಿಯಾದ ಬಳಿಕ ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿಯಾಗಿದ್ದರು. ಕೆ.ಸಿ.ರೆಡ್ಡಿ ಸಮರ್ಥ ಆಡಳಿತಗಾರರಾಗಿದ್ದರು.

ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿದ್ದರು. ಅವರಿಂದಾಗಿಯೇ ಕಾಂಗ್ರೆಸ್ ಇಂದು ಬಲಿಷ್ಠವಾಗಿ ಕೇಂದ್ರ ಮತ್ತು ರಾಜ್ಯದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ ಎಂದರು.


ರಾಜ್ಯದಲ್ಲಿ ಎಚ್‌ಎಂಟಿ, ಐಟಿಐ ಇಸ್ರೋದಂತಹ ಸಂಸ್ಥೆಗಳು ಕರ್ನಾಟಕದಲ್ಲಿ ಆರಂಭವಾಗಲು ಕೆ.ಸಿ.ರೆಡ್ಡಿ ಅವರ ಪಾತ್ರ ಬಹುಮುಖ್ಯವಾಗಿತ್ತು. ಕೇಂದ್ರದಲ್ಲೂ ಕೈಗಾರಿಕಾ ಸಚಿವರಾಗಿ ಕೆಲಸ ಮಾಡಿದ್ದರು ಎಂದು ಹೇಳಿದರು.

ಸಮರ್ಥ ಪ್ರಾಮಾಣಿಕ ರಾಜಕಾರಣಿಯಾಗಿದ್ದರು. ಸ್ವಾತಂತ್ರ ಹೋರಾಟದಲ್ಲಿ ಭಾಗಿಯಾಗಿದ್ದರು. ಅವರ ಆಡಳಿತ ನಮೆಲ್ಲರಿಗೂ ಮಾದರಿಯಾಗಿದೆ ಎಂದರು.

ಬಂಡಾಯ ಮಣಿಸಿ ದಾವಣಗೆರೆ ಬೈ ಎಲೆಕ್ಷನ್ ಗೆದ್ದ ಸಮರ್ಥ್

ದಾವಣಗೆರೆ,ಮೇ 04

ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಅವರ ಮೊಮ್ಮಗ, ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಗೆದ್ದು ಬೀಗಿದ್ದಾರೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸ್ ಕರಿಯಪ್ಪಗೆ ಸೋಲಾಗಿದ್ದು, ಆ ಮೂಲಕ ರಾಜ್ಯದಲ್ಲಿ ನಡೆದ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಪರಾಭಯಗೊಂಡಿದೆ. ತನ್ನದೇ ಹಿಡಿತದಲ್ಲಿದ್ದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರವನ್ನು ಆಡಳಿತಾರೂಢ ಕಾಂಗ್ರೆಸ್ ಮರಳಿ ತೆಕ್ಕೆಗೆ ಪಡೆದಿದೆ.



ವಿಜಯ್ ಸುನಾಮಿಗೆ ಕೊಚ್ಚಿಹೋದ ಡಿಎಂಕೆ ಕುಟುಂಬ ರಾಜಕೀಯ




ಚನ್ನೈ, ಮೇ 4- ಶಿಷ್ಟಾಚಾರಕ್ಕೆ ತಿಲಾಂಜಲಿ ಹಾಡಿ ರಾಜ್ಯದಲ್ಲಿ ಮತ್ತೆ ಎರಡನೇ ಬಾರಿಗೆ ಅಧಿಕಾರ ಹಿಡಿಯುತ್ತೇವೆ ಎಂಬ ಅತಿಯಾದ ಆತವಿಶ್ವಾಸದಲ್ಲಿದ್ದ ಡಿಎಂಕೆ ಸೋಲು ಕುಟುಂಬ ವ್ಯಾಮೋಹವೇ ಕಾರಣ ಎನ್ನಲಾಗುತ್ತಿದೆ.

ಜನಪರ ಯೋಜನೆಗಳ ಅನುಷ್ಠಾನದ ಹೊರತಾಗಿಯೂ ಡಿಎಂಕೆ ಇಷ್ಟು ಹೀನಾಯವಾಗಿ ಸೋಲುತ್ತದೆ ಎಂದು ಯಾವ

ಮೂರನೇಯ ಪುಟಕ್ಕೆ

ಸಿಪಿಐ (ಎಂಎಲ್) ರೆಡ್ ಸ್ಟಾರ್ 13ನೇ ಮಹಾ ಅಧಿವೇಶನಕ್ಕೆ ಸಜ್ಜು



ರಾಯಚೂರು, ಮೇ 4-ಸಿಪಿಐ (ಎಂಎಲ್) ರೆಡ್ ಸ್ಟಾರ್ ಪಕ್ಷದ 13ನೇ ಮಹಾ ಅಧಿವೇಶನವನ್ನು ಸೆಪ್ಟೆಂಬರ್ 16ರಿಂದ 20ರವರೆಗೆ ರಾಯಚೂರಿನಲ್ಲಿ ನಡೆಸಲು ನಿರ್ಧರಿಸಲಾಗಿದ್ದು, ಇದರ ಅಂಗವಾಗಿ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪಿ.ಜೆ. ಜೇಮ್ಸ್ ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಮೇ 3ರಂದು ನಗರದ ಕನ್ನಡ ಭವನದಲ್ಲಿ ನಡೆದ ಸಭೆಯಲ್ಲಿ 75 ಸದಸ್ಯರ ಸ್ವಾಗತ ಸಮಿತಿಯನ್ನು ರಚಿಸಲಾಗಿದ್ದು, ಕಾಮ್ರೇಡ್ ರಾಘವೇಂದ್ರ ಕುಷ್ಟಗಿ ಅವರನ್ನು ಅಧ್ಯಕ್ಷರಾಗಿ ಹಾಗೂ ಆರ್. ಮಾನಸಯ್ಯ ಅವರನ್ನು ಪ್ರಧಾನ ಸಂಚಾಲಕರಾಗಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಜಾಗತಿಕ ಹಾಗೂ ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ನಡುವೆ ನಡೆಯುತ್ತಿರುವ ಈ ಮಹಾ ಅಧಿವೇಶನದಲ್ಲಿ ಸಾಮ್ರಾಜ್ಯಶಾಹಿಯುದ್ಧ, ಫ್ಯಾಸಿಸಂ ಹಾಗೂ ಜಾತಿ ವಿನಾಶ ಕುರಿತು ಮೂರು ಪ್ರಮುಖ ವಿಚಾರಗೋಷ್ಠಿಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.ಅಧಿವೇಶನದಲ್ಲಿ ದೇಶದ ವಿವಿಧ ಕಮ್ಯುನಿಸ್ಟ್ ಪಕ್ಷಗಳ ನಾಯಕರು, ಪ್ರಗತಿಪರ ಸಂಘಟನೆಗಳ ಪ್ರತಿನಿಧಿಗಳು, ವಿದ್ವಾಂಸರು ಹಾಗೂ ವಿದೇಶಿ ಸಹೋದರ ಕಮ್ಯುನಿಸ್ಟ್ ಪಕ್ಷಗಳ ಮುಖಂಡರು ಭಾಗವಹಿಸುವ ನಿರೀಕ್ಷೆಯಿದೆ ಎಂದರು.ಸ್ವಾಗತ ಸಮಿತಿಯ ಉಪಾಧ್ಯಕ್ಷರಾಗಿ ಎಂ.ಡಿ. ಇಕ್ಕಾಲ್, ಎಚ್.ಎನ್. ಬಡಿಗೇರ್, ವೀರಭದ್ರಪ್ಪ ಹಾಗೂ ರವೀಂದ್ರನಾಥ ಪಟ್ಟಿ ಆಯ್ಕೆಯಾಗಿದ್ದು, ಬಿ. ರುದ್ರಯ್ಯ, ಎಂ.ಡಿ. ಅಮೀರ್ ಅಲಿ ಮತ್ತು ಎಂ. ಗಂಗಾಧರ್ ಅವರನ್ನು ಸಂಚಾಲಕರಾಗಿ ನೇಮಕ ಮಾಡಲಾಗಿದೆ.ಇದೇ ವೇಳೆ ಬಿ. ಬಸವರಾಜ್, ನೂರ್ಜಹಾನ್ ಎಂ., ಖಾಜಾ ಅಸ್ಲಾಂ ಪಾಷಾ, ಜೆ.ಬಿ. ರಾಜು, ರಾಜು ಪಟ್ಟಿ, ಬಾಬು ಬಂಡಾರಿಗಲ್, ಗುರುರಾಜ ಗೌಡೂರು, ನಾರಾಯಣ ಬೆಳಗುರ್ಕಿ, ಎಂ. ನಿರಂಜನ್ ಹಾಗೂ ಕಬೀರ್ ಅವರನ್ನು ಒಳಗೊಂಡ ಕಾರ್ಯಕಾರಿ ಸಮಿತಿಯನ್ನೂ ರಚಿಸಲಾಗಿದೆ.

ಪಕ್ಷದ ಮಹಾ ಅಧಿವೇಶನವನ್ನು ಯಶಸ್ವಿಗೊಳಿಸಲು ಎಲ್ಲಾ ಕ್ರಾಂತಿಕಾರಿ, ಎಡಪಂಥೀಯ, ಪ್ರಗತಿಪರ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಬೆಂಬಲ ಮತ್ತು ಸಹಕಾರ ನೀಡಬೇಕು ಎಂದು ನಾಯಕರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಆರ್. ಮಾನಸಯ್ಯ, ಕಬೀರ್ ಎಂ.ಡಿ. ಅಮೀರ್ ಅಲಿ, ಎಂ. ಗಂಗಾಧರ್ ಸೇರಿದಂತೆ ಉಪಸ್ಥಿತರಿದ್ದರು.

ದಾವಣಗೆರೆಯಲ್ಲಿ ಕಾಂಗ್ರೆಸ್ ಗೆಲವು ವಸಂತಕುಮಾರ ಹರ್ಷ



ರಾಯಚೂರು,ಏ.04

ಬಾಗಲಕೋಟ್ ವಿಧಾನ ಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ 21800 ಮತಗಳ ಅಂತರದಿಂದ ಗೆಲವು ಸಾಧಿಸಿರುವದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷದ ಸರಕಾರಕ್ಕೆ ಜನತೆ ನೀಡಿದ ಬೆಂಬಲವಾಗಿದೆ ಎಂದು ಬಾಗಲಕೋಟ ವಿಧಾನಸಭಾ ಕ್ಷೇತ್ರದ ಚುನಾವಣಾ ಉಸ್ತುವಾರಿ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಎ.ವಸಂತಕುಮಾರ ಹರ್ಷ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ 97000 ಮತಗಳನ್ನು ಪಡೆದು ಬರ್ಜರಿ ಗೆಲುವು ಸಾಧಿಸಿದ್ದಾರೆ. ಈ ಚುನಾವಣೆಯು ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ಎರಡು ವರ್ಷಗಳ ನಂತರದಲ್ಲಿ ನಡೆಯುವ ರಾಜ್ಯ ವಿಧಾನಸಭಾ ಕ್ಷೇತ್ರದ ಚುನಾವಣೆಗೆ ಮುನ್ನುಡಿಯಾಗಿದೆ, ರಾಜ್ಯದ ಜನತೆ ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳಿಗೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನೀಡಿದ ಬೆಂಬಲವಾಗಿದೆ, 2028ರಲ್ಲಿಯೂ ಸಹ ಕಾಂಗ್ರೆಸ್ ಪಕ್ಷದ ಸರಕಾರವೇ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ ಎನ್ನುವದಕ್ಕೆ ಸಾಕ್ಷಿಯಾಗಿದೆ.

ಈ ಸಂದರ್ಭದಲ್ಲಿ ಬಾಗಲಕೋಟ ವಿಧಾನಸಭಾ ಉಪಚುನಾವಣೆ ಗೆ ಹಗಲಿರುಳು ಶ್ರಮಿಸಿದ ಸತೀಶ ಜಾರಕಿಹೊಳಿ, ಉಸ್ತುವಾರಿ ಸಚಿವರಾದ ಆರ್.ಬಿ.ತಿಮ್ಮಾಪುರ, ಮುಖ್ಯ ಮಂತ್ರಿ ಸಿದ್ದರಾಮಯ್ಯನವರು, ಡಿ.ಕೆ.ಶಿವಕುಮಾರ, ಎಲ್ಲಾ ಸಚಿವರು, ಶಾಸಕರು ಹಾಗೂ ಎಲ್ಲಾ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಲಾಗುತ್ತದೆ.

ಜಿಲ್ಲಾ ಕಾರಾಗೃಹದಲ್ಲಿ ಸುದರ್ಶನ ಕ್ರಿಯಾ ಸಮಾರೋಪ: ಬಂಧಿಗಳಿಗೆ ಮನಶಾಂತಿ-ಒತ್ತಡ ನಿವಾರಣೆಗೆ ಹೊಸ ದಾರಿ



ರಾಯಚೂರು, ಮೇ 3-

ರಾಯಚೂರು ಜಿಲ್ಲಾ ಕಾರಾಗೃಹದಲ್ಲಿ ಆರ್ಟ್ ಆಫ್ ಲಿವಿಂಗ್ ವತಿಯಿಂದ ಪ್ರಿಸನ್ ಸ್ಮಾರ್ಟ್ () ಕಾರ್ಯಕ್ರಮದ ಅಂಗವಾಗಿ ಒಂದು ವಾರದ ಸುದರ್ಶನ ಕ್ರಿಯಾ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಇದರ ಸಮಾರೋಪ ಕಾರ್ಯಕ್ರಮ ಇಂದು ಜರುಗಿತು.

ಈ ಕಾರ್ಯಕ್ರಮವನ್ನು ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕರಾದ ಶ್ರೀ ರವಿ ಶಂಕರ್ ಅವರಿಂದ ರೂಪಿಸಲ್ಪಟ್ಟಿದ್ದು, ವಿಚಾರಣಾಧೀನ ಬಂಧಿಗಳ ಮಾನಸಿಕ ಆರೋಗ್ಯ ಮತ್ತು ಉಸಿರಾಟ ತಂತ್ರಗಳ ಮೇಲೆ ವಿಶೇಷವಾಗಿ ಕೇಂದ್ರೀಕರಿ ಸಲಾಗಿತ್ತು. ಒತ್ತಡ ನಿವಾರಣೆ, ಭಾವನಾತ್ಮಕ ಸಮತೋಲನ ವೃದ್ಧಿ, ಆಂತರಿಕ ಶಾಂತಿ ಸಾಧನೆ ಹಾಗೂ ನಿದ್ರೆಯ ಗುಣಮಟ್ಟದಲ್ಲಿ ಸುಧಾರಣೆ ಕುರಿತಾಗಿ ತರಬೇತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರಾಗೃಹ ಅಧೀಕ್ಷಕಿ ಅನಿತಾ ಹಿರೇಮನಿ, ಜೈಲರ್ ಈರಯ್ಯ ಹಿರೇಮಠ, ವೆಂಕಟೇಶ್ ನಾಯಕ ಸೇರಿದಂತೆ ಆರ್ಟ್ ಆಫ್ ಲಿವಿಂಗ್ ಕಾರ್ಯಕರ್ತರಾದ ರಮೇಶ್ ಜೈನ್, ಕಿಶೋರ್ ಕೊಂಡ, ಸರಸ್ವತಿ ಕಿಲ್ಕಿಲೆ, ಶ್ರೀನಿವಾಸ ಸಾಗರ್, ಚಂದ್ರಶೇಖರ್ ಹಾಗೂ ಇತರರು ಉಪಸ್ಥಿತರಿದ್ದರು.

ಕಾರಾಗೃಹದ ನೂರಕ್ಕೂ ಹೆಚ್ಚು ವಿಚಾರಣಾಧೀನ ಬಂಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದರು.

ಸಾಮೂಹಿಕ ವಿವಾಹ, ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ

ತುಂಗಭದ್ರಾ ಕ್ರಸ್ಟ್‌ಗೇಟ್ ಅಳವಡಿಕೆ ಪೂರ್ಣ: ಡಿ.ಕೆ.ಶಿ



ಸಿಂಧನೂರು,ಮೇ.03-

ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳ ಅಳವಡಿಕೆ ನವೀಕರಣ ಕಾಮಗಾರಿ ಪೂರ್ಣಗೊಂಡಿದ್ದು, ಇನ್ನೂ 15 ದಿನಗಳಲ್ಲಿ ಬಾಕಿ ಉಳಿದ ಕೆಲಸಗಳು ಪೂರ್ಣಗೊಳ್ಳಲಿವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ತಾಲೂಕು ಕ್ರೀಡಾಂಗಣದಲ್ಲಿ ಬಸನಗೌಡ ಫೌಂಡೇಶನ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 151 ಸರ್ವಧರ್ಮ ಸಾಮೂಹಿಕ ವಿವಾಹ, 5001 ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಶಾಸಕ ಬಸನಗೌಡ ಬಾದರ್ಲಿ ಅವರ ಒಂದು ವರ್ಷದ ಸಾಧನೆ ಕುರಿತ ರೈತನ ಮಗನ ರಾಜಕೀಯ ಹೆಜ್ಜೆಗಳು ಪುಸ್ತಕ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶೀಘ್ರದಲ್ಲೇ ಜಲಾಶಯದ 32 ಗೇಟ್‌ಗಳನ್ನು ಉದ್ಘಾಟಿಸಿ ಈ ಭಾಗದ ರೈತರಿಗೆ ಸಮರ್ಪಕ ನೀರು ಒದಗಿಸುವ ಸಂಕಲ್ಪ ಹೊಂದಿದ್ದೇವೆ ಎಂದು ತಿಳಿಸಿದರು.

ಬಸನಗೌಡ ಬಾದರ್ಲಿ ಆಯೋಜಿಸಿರುವ ಕಾರ್ಯಕ್ರಮ ಕೇವಲ ಸಾಮೂಹಿಕ ವಿವಾಹವಲ್ಲ. ಇದು ನಮ್ಮ ಸಂಸ್ಕೃತಿ, ಧರ್ಮ ಹಾಗೂ ಸಾಮರಸ್ಯವನ್ನು ಕಾಪಾಡುವ ಬೃಹತ್ ಸಮ್ಮೇಳನವಾಗಿದೆ. ಸರ್ವ ಧರ್ಮೀಯರನ್ನು ಒಳಗೊಂಡು ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಶಾಸಕ ಬಸನಗೌಡ ಬಾದರ್ಲಿ ವಿದ್ಯಾರ್ಥಿ ದಶೆಯಿಂದಲೇ ಪಕ್ಷ ಸಂಘಟನೆ, ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ಶ್ರೀಮಂತರಲ್ಲ, ಹೃದಯ ಶ್ರೀಮಂತರಾಗಿದ್ದಾರೆ. ರಾಜಕೀಯವಾಗಿ ಅವರ ಬೆನ್ನ ಹಿಂದೆ ನಾನು ಇದ್ದೇನೆ. ಸಿಂಧನೂರಿನ ಜನತೆ ಆಶೀರ್ವಾದಿಸಬೇಕು ಎಂದು ಹೇಳಿದರು.

ಪಕ್ಷವು ಬಸನಗೌಡ ಬಾದರ್ಲಿ ಅವರಿಗೆ ಪರಿಷತ್ ಸದಸ್ಯರಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿದೆ. ಒಂದು ವರ್ಷದ ಅವಧಿಯಲ್ಲಿ ಅವರು ಶಕ್ತಿ ಮೀರಿ ಅಭಿವೃದ್ಧಿಗೆ

ಮೂರನೇಯ ಪುಟಕ್ಕೆ

ಮೇ 15ರಂದು ತುಂಗಭದ್ರಾ ಅಣೆಕಟ್ಟು ಹೊಸ ಗೇಟ್ ಉದ್ಘಾಟನೆ : ಡಿಸಿಎಂ ಡಿ.ಕೆ.ಶಿವಕುಮಾರ್

ಹೊಸಪೇಟೆ.ಮೇ.04-

ತುಂಗಭದ್ರಾ ಅಣೆಕಟ್ಟಿನ 33 ನೂತನ ಗೇಟ್ ಗಳ ಅಳವಡಿಕೆಯಾಗಿದ್ದು, ಸ್ವಲ್ಪ ಕೆಲಸ ಬಾಕಿ ಇದೆ. ಮೇ 7ರ ಒಳಗಾಗಿ ಈ ಕೆಲಸ ಪೂರ್ಣಗೊಳಿಸಿ, ಮೇ 15ರಂದು ಇದರ ಉದ್ಘಾಟನೆ ಮಾಡಲು ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ತುಂಗಭದ್ರಾ ಅಣೆಕಟ್ಟು ಗೇಟ್ ಅಳವಡಿಕೆ ಕಾರ್ಯ ಪರಿಶೀಲನೆ ನಡೆಸಿದ ಬಳಿಕ ಶಿವಕುಮಾರ್ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.



ಇಂದು ಬಹಳ ಸಂತೋಷದ ದಿನ. 7.50 ಲಕ್ಷ ರೈತರ ಬದುಕಿಗೆ ರಕ್ಷಣೆ ನೀಡಲಾಗಿದೆ. ಅಣೆಕಟ್ಟು ವಿಚಾರವಾಗಿ ಟೀಕೆ ಮಾಡಿದವರಿಗೆ ಇಂದು ಉತ್ತರ ಸಿಕ್ಕಿದೆ. ನಾವು ಕೈಗೊಂಡ ತೀರ್ಮಾನಕ್ಕೆ ಫಲ ಸಿಕ್ಕಿದೆ. ನಾಲ್ಕು ಜಿಲ್ಲೆಗಳ ರೈತರನ್ನು ಕರೆಸಿ ಕಾರ್ಯಕ್ರಮ ಮಾಡಲಾಗುವುದು. ಈಗ ಅಣೆಕಟ್ಟಿನಲ್ಲಿ 10.50 ಟಿಎಂಸಿ ನೀರು ಇದೆ. ಮಳೆ ಬಿದ್ದರೆ 2 ತಿಂಗಳಲ್ಲಿ 44 ಟಿಎಂಸಿ ನೀರು ತುಂಬಲಿದೆ. ಈಗ 54 ಕೋಟಿ ರೂ. ವೆಚ್ಚ ಮಾಡಲಾಗಿದೆ. 64:34 ಅನುಪಾತದಲ್ಲಿ ಎರಡು ರಾಜ್ಯಗಳು ಬಂಡವಾಳ ಹಾಕಲಾಗುತ್ತಿದೆ ಎಂದು ತಿಳಿಸಿದರು.

ಅಣೆಕಟ್ಟು ಆಡಳಿತ ವಿಚಾರದಲ್ಲಿ ಸ್ವಾತಂತ್ರ್ಯ ನೀಡಿದ್ದು, ಯಾವುದೇ ಹಸ್ತಕ್ಷೇಪ ಆಗದಂತೆ ನೋಡಿಕೊಂಡಿದ್ದೇವೆ. 33 ಗೇಟ್ ಅಳವಡಿಕೆ ದೇಶಕ್ಕೆ ಮಾದರಿಯಾಗಿದೆ. ಇಡೀ ದೇಶ ಈ ಗೇಟ್ ಅಳವಡಿಕೆ ಕಾರ್ಯವನ್ನು ಇಡೀ ದೇಶ ನೋಡುತ್ತಿತ್ತು. 19ನೇ ಕ್ರೆಸ್ಟ್ ತುಂಡರಿಸಿದಾಗ ನಾವು ತಜ್ಞರ ಅಭಿಪ್ರಾಯ ಪಡೆದು ಅವರ ನೇತೃತ್ವದಲ್ಲೇ ಗೇಟ್ ಅಳವಡಿಕೆ ಕಾರ್ಯ ಮಾಡಿದ್ದೆವು ಎಂದರು.

ಇದರ ಜೊತೆಗೆ ಬೇರೆ ಯೋಜನೆಗಳಿಗೆ 300 ಕೋಟಿ ರೂ. ನೀಡಿದ್ದೇವೆ. ಸರಪಳಿ ಚೆನ್ನಾಗಿದೆ ಎಂದು ಹೇಳಿದ್ದರೂ, ಅದನ್ನು ಬದಲಿಸಲು ಸೂಚಿಸಿರುವೆ. ಇದರ ಜವಾಬ್ದಾರಿ ಚೆನ್ನೈ ಮೂಲದ ಸಂಸ್ಥೆಗೆ ನೀಡಲಾಗಿದೆ. ಮೊದಲ ಹಂತದ ಸರಪಳಿ ಆಗಮಿಸಲಿದೆ. ಈ ಕಾರ್ಯದಿಂದ ರೈತರು, ಜನರು ಸಂತೋಷವಾಗಿದ್ದಾರೆ. ಮುಂದಿನ 50 ವರ್ಷ ಈ ಗೇಟ್ ಗಳು ಏನೂ ಆಗುವುದಿಲ್ಲ ಎಂದು ಹೇಳಿದರು.

ಟೀಕಾಕಾರರ ಬಾಯಿ ಮುಚ್ಚಿಸಿದ್ದೇವೆ :

ರೈತರು ನಮ್ಮ ಪರಿಸ್ಥಿತಿ ಅರಿತು, ತಮ್ಮ ಒಂದು ಬೆಳೆಯನ್ನು ತ್ಯಾಗ ಮಾಡಿದ್ದಾರೆ. ಈ ಸಹಕಾರ ನೀಡಿದ ರೈತರಿಗೆ ನಮನ ಸಲ್ಲಿಸುತ್ತೇನೆ. ರಾಜಕೀಯವಾಗಿ ಟೀಕೆ ಮಾಡುವವರು ಚಟಕ್ಕೆ ಮಾತನಾಡುತ್ತಾರೆ ಹೊರತು ಇಂತಹ ಕೆಲಸ ಮಾಡಿದ್ದಾರಾ? ಈ ಕೆಲಸದ ಮೂಲಕ ಟೀಕಾಕಾರರ ಬಾಯಿ ಮುಚ್ಚಿಸಿದ್ದೇವೆ ಎಂದರು.

ನವಲಿ ಯೋಜನೆ ಚರ್ಚೆಗೆ ಆಂಧ್ರ ಸಿಎಂ ಸಮಯ ನೀಡುತ್ತಿಲ್ಲ : ನವಲಿ ಸಮಾನಾಂತರ ಜಲಾಶಯ ಹಾಗೂ ಹೂಳು ಎತ್ತುವ ಬಗ್ಗೆ ಕೇಳಿದಾಗ, ಈ ವಿಚಾರವಾಗಿ ಆಂಧ್ರಪ್ರದೇಶ ಮುಖ್ಯಮಂತ್ರಿಗಳು ನಮಗೆ ಸಮಯ ನೀಡುತ್ತಿಲ್ಲ. ಇನ್ನು ಈ ನೀರನ್ನು ಪಂಪ್ ಮಾಡಿ ಬೇರೆ ಕಡೆ ಸಂಗ್ರಹಣೆ ಮಾಡಬೇಕು ಎಂಬ ಪ್ರಸ್ತಾವನೆ ವರದಿಯೂ ನಮ್ಮ ಮುಂದೆ ಇದೆ. ಈ ವಿಚಾರವಾಗಿ ಮಂಡಳಿಯಲ್ಲಿ ಚರ್ಚೆ ಮಾಡಲು ಆಂಧ್ರ ಸಿಎಂ ಮುಂದಾಗುತ್ತಿಲ್ಲ. ಅವರಿಗೆ ಈಗ ಹೆಚ್ಚಿನ ನೀರು ಸಿಗುತ್ತಿದೆ. ಹೀಗಾಗಿ ಅವರು ಈ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ. ಈ ಬಗ್ಗೆ ಏನೇ ತೀರ್ಮಾನ ಆಗಬೇಕಿದ್ದರೂ ಮಂಡಳಿಯಲ್ಲಿ ತೀರ್ಮಾನ ಆಗಬೇಕು ಎಂದು ತಿಳಿಸಿದರು. ಅಣೆಕಟ್ಟು ಎತ್ತರ ಹೆಚ್ಚಳ ಪ್ರಸ್ತಾಪವಿಲ್ಲ : ಅಣೆಕಟ್ಟು ಎತ್ತರ ಮಾಡಲಾಗುವುದೇ ಎಂದು ಕೇಳಿದಾಗ, ಆ ವಿಚಾರಕ್ಕೆ ಕೈ ಹಾಕುವುದಿಲ್ಲ. ಈಗ ಇರುವ ವ್ಯವಸ್ಥೆಯಲ್ಲಿ ವ್ಯರ್ಥವಾಗು ತ್ತಿರುವ ನೀರನ್ನು ಉಳಿಸಿಕೊಳ್ಳಲು ದಾರಿ ಹುಡುಕಲಾಗುತ್ತಿದೆ ಎಂದು ತಿಳಿಸಿದರು. ಕೈಗಾರಿಗೆಗಳಿಂದಾಗಿ ಅಣೆಕಟ್ಟು ನೀರು ಕಲುಷಿತವಾಗುತ್ತಿದೆ ಎಂದು ಕೇಳಿದಾಗ, ಈ ಬಗ್ಗೆ ವರದಿ ತರಿಸಿಕೊಂಡು ನೋಡುತ್ತೇವೆ ಎಂದರು.



ಜೇವರ್ಗಿ ಶಿಕ್ಷಣವೇ ಬದುಕಿನ ಭದ್ರ ಬುನಾದಿ: ಜ್ಞಾನಪ್ರಕಾಶ ಸ್ವಾಮೀಜಿ

ಜೇವರ್ಗಿ,ಮೇ.04-

ಜ್ಞಾನವೆಂಬುದು ಮನುಷ್ಯನ ಬದುಕಿಗೆ ಭದ್ರ ಬುನಾದಿಯಾಗಿದೆ. ಶಿಕ್ಷಣ ಪುರುಷನಿಗೆ ಎಷ್ಟು ಮುಖ್ಯವೋ, ಹೆಣ್ಣಿಗೂ ಅಷ್ಟೇ ಪ್ರಮುಖವಾಗಿದೆ,'' ಎಂದು ಮೈಸೂರಿನ ಉರಿಲಿಂಗ ಸಂಸ್ಥಾನ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ಯಡ್ರಾಮಿ ತಾಲೂಕಿನ ಇಜೇರಿ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಮತ್ತು ಸರ್ಕಾರಿ ಪ್ರೌಢ ಶಾಲೆಯ ಸಹಯೋಗದಲ್ಲಿ ಆಯೋಜಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮಹಿಳೆಯರ ಬಗ್ಗೆ ಅಪಾರ ಪ್ರೀತಿ ಮತ್ತು ಗೌರವ ಹೊಂದಿದ್ದರು. ಮಹಿಳೆಯರ ಹಕ್ಕುಗಳನ್ನು ಸಂವಿಧಾನದ ಮೂಲಕ ಭದ್ರಪಡಿಸುವಲ್ಲಿ ಅವರ ಪಾತ್ರ ಅಪಾರವಾಗಿದೆ ಎಂದು ತಿಳಿಸಿದರು.

ಸರ್ವಧರ್ಮ, ಸರ್ವಜನಾಂಗದ ಜನರನ್ನು ಒಂದಾಗಿ ಸೇರಿಸಿ ಜಯಂತಿ ಆಚರಿಸುವುದೇ ನಿಜವಾದ ಅಂಬೇಡ್ಕರ್ ಜಯಂತಿ. ಪ್ರತಿಯೊಬ್ಬರ ಮನೆಯಲ್ಲೂ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಅದರಲ್ಲಿ ಅಂಬೇಡ್ಕರ್ ಅವರ ಕನಸು ಅಡಗಿದೆ ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕಿ ಡಾ. ಸುಜಾತಾ ಮಾತನಾಡಿ, ಅಂಬೇಡ್ಕರ್ ಅವರ ಆದರ್ಶಗಳನ್ನು ಯುವಪೀಳಿಗೆ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಸೈದಪ್ಪ ಕಟ್ಟಿಮನಿ, ರುಕುಮ್ ಪಟೇಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಾಲಯ್ಯ ಗುತ್ತೇದಾರ, ಜಿಲ್ಲಾ ಪಂಚಾಯತ್ ಸದಸ್ಯ ಶಾಂತಪ್ಪ ಕೂಡಲಗಿ, ಚಂದ್ರಶೇಖರ ಹರನಾಳ, ಮರೆಪ್ಪ ಬಡಿಗೇರ, ಬಸ್ಸು ಕಟ್ಟಿಮನಿ, ರವಿ ಶ್ರುತಿ, ಹೊನ್ನಪ್ಪ ಬಡಿಗೇರ, ಶರಣಪ್ಪ ಕಟ್ಟಿಮನಿ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಖ್ವಾಜಾ ಬಂದಾ ನವಾಜ್ ದರ್ಗಾದ 622ನೇ ಅದ್ಧೂರಿ ಸಂದಲ್ ಮೆರವಣಿಗೆ

ಕಲಬುರಗಿ,ಮೇ.04-

ನಗರದ ಐತಿಹಾಸಿಕ ಧಾರ್ಮಿಕ ಕೇಂದ್ರವಾಗಿರುವ ಪ್ರಸಿದ್ಧ ಸೂಫಿ ಸಂತ ಖ್ವಾಜಾ ಬಂದಾನವಾಜ್ ದರ್ಗಾದ 622ನೇ ವಾರ್ಷಿಕ ಉರೂಸ್ ನಿಮಿತ್ತ ಭಾನುವಾರ ನಗರದಲ್ಲಿ ಅದ್ದೂರಿಯಾಗಿ ಸಂದಲ್ ಮೆರವಣಿಗೆ ನಡೆಯಿತು.

ಬೆಳಿಗ್ಗೆಯಿಂದಲೇ ಸಾವಿರಾರು ಭಕ್ತರು ದರ್ಗಾ ಪ್ರದೇಶಕ್ಕೆ ಆಗಮಿಸಿ ಪ್ರಾರ್ಥನೆ ಸಲ್ಲಿಸಿದರು. ಮಧ್ಯಾಹ್ನದ ಬಳಿಕ ನಗರದ ಮಹೆಬೂಬ್ ಗುಲ್ಶನ್ ಉದ್ಯಾನವನದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ನಂತರ ಸಂದಲ್ ಮೆರವಣಿಗೆ ಶೋಭಾಯಾತ್ರೆ ರೂಪದಲ್ಲಿ ಆರಂಭವಾಯಿತು.

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷರು ಹಾಗೂ ದರ್ಗಾದ ಸಜ್ಜಾದಾ ನಶೀನ್ ಡಾ. ಹಫೀಜ್ ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನಿ ಅವರ ನೇತೃತ್ವದಲ್ಲಿ ಮೆರವಣಿಗೆ ಸಾಗಿತು. ವಿವಿಧ ಧಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು, ದರ್ಗಾ ಸಮಿತಿ ಸದಸ್ಯರು, ಉಲಮಾಗಳು ಹಾಗೂ ಗಣ್ಯರು ಮೆರವಣಿಗೆಯಲ್ಲಿ ಭಾಗವಹಿಸಿದರು.

ಸಾಂಪ್ರದಾಯಿಕ ವಾದ್ಯಗೋಷ್ಠಿ, ಧಾರ್ಮಿಕ ಘೋಷಣೆಗಳು ಹಾಗೂ ಹೂವಿನ ಅಲಂಕಾರಗಳಿಂದ ಅಲಂಕರಿಸಲಾದ ಸಂದಲ್ ಪಾತ್ರೆಗಳು ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿದ್ದವು. ಭಕ್ತರು ''ಯಾ ಖ್ವಾಜಾ ಬಂದಾನವಾಜ್'' ಎಂಬ ಘೋಷಣೆಗಳೊಂದಿಗೆ ಭಕ್ತಿಭಾವ ವ್ಯಕ್ತಪಡಿಸಿದರು.

ಮೆರವಣಿಗೆ ನಗರದ ಪ್ರಮುಖ ಮಾರ್ಗಗಳಾದ ಜಗತ್ ವೃತ್ತ, ಸೂಪರ್ ಮಾರ್ಕೆಟ್, ಹಫ್ತ ಗುಂಬಜ್ ಮೂಲಕ ಸಾಗಿಬಂದು ದರ್ಗಾ ಆವರಣದಲ್ಲಿ



ಸಮಾಪ್ತಿಯಾಯಿತು. ಈ ವೇಳೆ ದರ್ಗಾದಲ್ಲಿ ವಿಶೇಷ ದುಆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಶಾಂತಿ ಮತ್ತು ಸೌಹಾರ್ದತೆಯ ಸಂಕೇತವಾಗಿರುವ ಈ ಸಂದಲ್ ಮೆರವಣಿಗೆಯಲ್ಲಿ ವಿವಿಧ ಧರ್ಮದ ಜನರು ಭಾಗವಹಿಸಿದ್ದು, ಕಲಬುರಗಿಯ ಸಾಂಸ್ಕೃತಿಕ ಏಕತೆಯನ್ನು ಮತ್ತೊಮ್ಮೆ ಮೆರೆದಿತು.

ಸುರಕ್ಷತೆ ದೃಷ್ಟಿಯಿಂದ ನಗರ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಂಡಿದ್ದು, ಸಂಚಾರ ವ್ಯವಸ್ಥೆಯಲ್ಲಿ ತಾತ್ಕಾಲಿಕ ಬದಲಾವಣೆ ಮಾಡಲಾಗಿತ್ತು. ಯಾವುದೇ ಅಹಿತಕರ ಘಟನೆಗಳಿಲ್ಲದೆ ಮೆರವಣಿಗೆ ಯಶಸ್ವಿಯಾಗಿ ನೆರವೇರಿತು.

ಪ್ರತಿ ವರ್ಷ ನಡೆಯುವ ಈ ಉರುಸ್ ಹಾಗೂ ಸಂದಲ್ ಮೆರವಣಿಗೆಗೆ ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ಆಗಮಿಸುತ್ತಾರೆ. ಈ ವರ್ಷದ ಕಾರ್ಯಕ್ರಮವೂ ಭಕ್ತಿ, ಭಾವನೆ ಮತ್ತು ಭವ್ಯತೆಯ ಮಿಶ್ರಣವಾಗಿ ಗಮನಸೆಳೆಯಿತು.

ಈ ಸಂದರ್ಭದಲ್ಲಿ ಮಹಮ್ಮದ್ ಸೈಯದ್ ಹುಸೈನಿ ಸಾಹೇಬ್ (ಸಜ್ಜಾದಾ ನಶೀನ್ ಅವರ ಹಿರಿಯ ಪುತ್ರ), ಸೈಯದ್ ಶಾ ಸಫಿಯುಲ್ಲಾ ಹುಸೈನಿ, ಸೈಯದ್ ಶಾ ರಹೀಮುಲ್ಲಾ ಹುಸೈನಿ, ಸೈಯದ್ ಶಾ ಹಸನ್ ಶಬ್ಬೀರ್ ಹುಸೈನಿ (ರೋಜಾ-ಎ-ಖುರ್ದ್ ಸಜ್ಜಾದಾ ನಶೀನ್), ಸೈಯದ್ ಶಾ ಹುಸೈನೀ, ಸೈಯದ್ ಅಹ್ಮದ್ ಹುಸೈನಿ, ಸೈಯದ್ ಮುರ್ತಜಾ ಹುಸೈನಿ, ಸೈಯದ್ ಅಕೀಬ್ ಹುಸೈನಿ ಸೇರಿದಂತೆ ಬಂದಾ ನವಾಜ್ ಖಾಂದಾನದ ಸದಸ್ಯರು ಹಾಜರಿದ್ದರು.

ಇದಲ್ಲದೆ ಸಜ್ಜಾದ್ಗಾನ್, ಮಂಶಾಯಿಂಖ್-ಎ-ಇಜಾಮ್, ಉಲಮಾ-ಎ-ಕಿರಾಮ್ ಹಾಗೂ ಸಾವಿರಾರು ಭಕ್ತರು ಮತ್ತು ಜಾಯರೀನ್‌ಗಳ ಭವ್ಯ ಉಪಸ್ಥಿತಿಯಿಂದ ನಗರದೆಲ್ಲೆಡೆ ಐತಿಹಾಸಿಕ ರಸ್ತೆಗಳ ಮೇಲೆ ಆತ್ಮೀಯ ಮತ್ತು ಆಧ್ಯಾತ್ಮಿಕ ವಾತಾವರಣ ಕಂಡುಬಂತು.

100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆ ಉದ್ಘಾಟನೆ ಶ್ರಮಿಕರೇ ದೇಶದ ನಿಜವಾದ ವಿಶ್ವಕರ್ಮರು-ಡಾ.ಮನ್ಸುಖ್

ಬಳ್ಳಾರಿ,ಮೇ 04-

ದೇಶದ ಶ್ರಮಿಕ ವರ್ಗವು ರಾಷ್ಟ್ರ ನಿರ್ಮಾಣದ ನಿಜವಾದ ಶಿಲ್ಪಿಗಳು ಮತ್ತು ನಮ್ಮ ಪಾಲಿನ ವಿಶ್ವಕರ್ಮರು. ಅವರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಕೇಂದ್ರ ಕಾರ್ಮಿಕ, ಉದ್ಯೋಗ ಹಾಗೂ ಯುವಜನ ವ್ಯವಹಾರಗಳ ಸಚಿವ ಡಾ.ಮನ್ಸುಖ್ ಮಾಂಡವೀಯ ಅವರು ಹೇಳಿದರು.

ಭಾನುವಾರ, ದೊಡ್ಡಬಳ್ಳಾಪುರದಲ್ಲಿ ನೂತನವಾಗಿ ನಿರ್ಮಿಸಲಾದ 100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆಯ ಉದ್ಘಾಟನೆ ಹಾಗೂ ಇದೇ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ನಿರ್ಮಾಣವಾಗಲಿರುವ 100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆಗೆ ವರ್ಚುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಉಚಿತ ಆರೋಗ್ಯ ತಪಾಸಣೆ ಅಭಿಯಾನ: ಹೊಸ ಕಾರ್ಮಿಕ ಸಂಹಿತೆಯ ಅಡಿಯಲ್ಲಿ, 40 ವರ್ಷ ದಾಟಿದ ಕಾರ್ಮಿಕರಿಗಾಗಿ ಮೇ 7 ರಿಂದ ದೇಶಾದ್ಯಂತ ಉಚಿತ ಆರೋಗ್ಯ ತಪಾಸಣೆ ಅಭಿಯಾನವನ್ನು ಪ್ರಾರಂಭಿಸಲಾಗುವುದು ಎಂದು ಸಚಿವರು ಘೋಷಿಸಿದರು.

ಸಾಮಾಜಿಕ ಭದ್ರತೆಯ ವಿಸ್ತರಣೆ: 2015 ರಲ್ಲಿ ಶೇ.19 ರಷ್ಟಿದ್ದ ಸಾಮಾಜಿಕ ಭದ್ರತಾ ವ್ಯಾಪ್ತಿಯು ಇಂದು ಶೇ.64 ಕ್ಕೆ ಏರಿಕೆಯಾಗಿದೆ. ಇಎಸ್‌ಐ ವಿಮಾದಾರರ ಸಂಖ್ಯೆ 2 ಕೋಟಿಯಿಂದ 4 ಕೋಟಿಗೆ ದ್ವಿಗುಣಗೊಂಡಿದೆ ಎಂದು ಸಚಿವರು ಮಾಹಿತಿ ನೀಡಿದರು.

ಶಿಕ್ಷಣದಲ್ಲಿ ಮೀಸಲಾತಿ: ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ 20 ಇಎಸ್‌ಐ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗಿದ್ದು, ಅಲ್ಲಿ ಶೇ. 40-50 ರಷ್ಟು ಸೀಟುಗಳನ್ನು ವಿಮಾದಾರರ



ಮಕ್ಕಳಿಗಾಗಿಯೇ ಮೀಸಲಿಡಲಾಗಿದೆ ಎಂದರು.

ದೊಡ್ಡಬಳ್ಳಾಪುರದ ಭಾಗದಲ್ಲಿ 1.5 ಲಕ್ಷಕ್ಕೂ ಹೆಚ್ಚು ನೋಂದಾಯಿತ ಕಾರ್ಮಿಕರಿದ್ದು, ಅವರ ಕುಟುಂಬದ ಸದಸ್ಯರನ್ನೂ ಸೇರಿ ಒಟ್ಟು 5.5 ಲಕ್ಷ ಜನರಿಗೆ ಈ ಹೊಸ ಆಸ್ಪತ್ರೆಯಿಂದ ಉಚಿತ ವೈದ್ಯಕೀಯ ಸೇವೆ ಲಭ್ಯವಾಗಲಿದೆ.

ಅದೇರೀತಿಯಾಗಿ, ಬಳ್ಳಾರಿ ವಿಭಾಗದ ಸುಮಾರು 64,000 ಕಾರ್ಮಿಕರು ಮತ್ತು ಅವರ ಕುಟುಂಬದವರು ಸೇರಿ 2 ಲಕ್ಷಕ್ಕೂ ಹೆಚ್ಚು ಜನರಿಗೆ ಉತ್ತಮ ವೈದ್ಯಕೀಯ ಸೇವೆ ಒದಗಿಸಲಿದೆ ಎಂದು ತಿಳಿಸಿದರು.

ಕೇಂದ್ರ ಕಾರ್ಮಿಕ ಮತ್ತು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಅವರು ಮಾತನಾಡಿ, ಈ ಆಸ್ಪತ್ರೆಯು ಒಪಿಡಿ, ಮಾಡ್ಯುಲರ್ ಆಪರೇಷನ್ ಥಿಯೇಟರ್, ತುರ್ತು ಚಿಕಿತ್ಸೆ, ಸ್ತ್ರೀರೋಗ, ಮಕ್ಕಳ ಆರೋಗ್ಯ ಸೇರಿದಂತೆ ಆಧುನಿಕ ಸೌಲಭ್ಯಗಳನ್ನು ಹೊಂದಿದ್ದು, ಕಾರ್ಮಿಕರ ಜೀವನಮಟ್ಟ ಸುಧಾರಿಸಲು ಸಹಕಾರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ನಿರ್ಮಾಣದಲ್ಲಿ ಶ್ರಮಿಸಿದ ಕಾರ್ಮಿಕರನ್ನು ಸಚಿವರು ಇದೇ ಸಂದರ್ಭದಲ್ಲಿ ಗೌರವಿಸಿದರು ಮತ್ತು ಫಲಾನುಭವಿಗಳಿಗೆ ಇಎಸ್‌ಐ ಸೌಲಭ್ಯಗಳ ಚೆಕ್ ವಿತರಿಸಿದರು.

ಈ ಸಂದರ್ಭದಲ್ಲಿ ಸಂಸದ ಡಾ.ಕೆ.ಸುಧಾಕರ್ ದೊಡ್ಡಬಳ್ಳಾಪುರ ಶಾಸಕ ಧೀರಜ್ ಮುನಿರಾಜು ಸೇರಿದಂತೆ ಹಲವು ಗಣ್ಯರು ಹಾಗೂ ವರ್ಚುವಲ್ ಮೂಲಕ ಬಳ್ಳಾರಿಯ ಇಎಸ್‌ಐ ಅಧಿಕಾರಿಗಳು ಉಪಸ್ಥಿತರಿದ್ದರು.

ಆಸ್ಪತ್ರೆಗಳ ವಿಶೇಷತೆ: ದೊಡ್ಡಬಳ್ಳಾಪುರದ ಇಎಸ್‌ಐ ಆಸ್ಪತ್ರೆಯನ್ನು 101.14 ಕೋಟಿ ರೂ. ವೆಚ್ಚದಲ್ಲಿ 5 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಸಾಮಾನ್ಯ ಔಷಧ ವಿಭಾಗ, ಶಸ್ತ್ರಚಿಕಿತ್ಸೆ, ಸ್ತ್ರೀರೋಗ ಮತ್ತು ಪ್ರಸೂತಿ, ಮಕ್ಕಳ ವಿಭಾಗ, ಮೂಳೆಚಿಕಿತ್ಸೆ, ತುರ್ತು ಚಿಕಿತ್ಸೆ, ರೇಡಿಯಾಲಜಿ ಮತ್ತು ಸುಸಜ್ಜಿತ ಪ್ರಯೋಗಾಲಯಗಳು ಒಳಗೊಂಡಿದೆ. ಆಸ್ಪತ್ರೆ ಆವರಣದಲ್ಲಿ ಸಿಬ್ಬಂದಿಗಾಗಿ 32 ವಸತಿಗೃಹಗಳನ್ನು ನಿರ್ಮಿಸಲಾಗಿದೆ. ಅದೇ ರೀತಿಯಾಗಿ, ಬಳ್ಳಾರಿಯಲ್ಲಿ ನಿರ್ಮಾಣವಾಗಲಿರುವ ಆಸ್ಪತ್ರೆಗೆ 150 ಕೋಟಿ ರೂ. ವೆಚ್ಚವಾಗಲಿದ್ದು, 5.21 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ತಲೆಯೆತ್ತಲಿದೆ. ಇದು ಉತ್ತರ ಕರ್ನಾಟಕದ ಕಾರ್ಮಿಕರಿಗೆ ವರದಾನವಾಗಲಿದೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ



ಯಡ್ರಾಮಿ,ಮೇ.04-

ನಿರಂತರ ಪರಿಶ್ರಮದಿಂದ ಎಸೆಸೆಲ್ಸಿ ಮತ್ತು ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ವಿದ್ಯಾರ್ಥಿಗಳು ಸಾಧನೆ ಮಾಡಿರುವುದು ಸಂತಸ ತಂದಿದೆ ಎಂದು ಗ್ರಾಮೀಣ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಶ್ರವಣಕುಮಾರ ನಾಯಕ ಹೇಳಿದರು.

ತಾಲೂಕಿನ ಇಜೇರಿ ಗ್ರಾಮದಲ್ಲಿ ಎಸೆಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಗ್ರಾಮೀಣ ಅಭಿವೃದ್ಧಿ ಹೋರಾಟ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉತ್ತಮ ಸಾಧನೆ ಮಾಡಿದವರನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ನೀಡಿದರೆ ಓದುತ್ತಿರುವ ಇತರ ಮಕ್ಕಳಿಗೆ ಪ್ರೇರಣೆ ನೀಡಿದಂತಾಗುತ್ತದೆ. ಅಲ್ಲದೆ ಮತ್ತಷ್ಟು ಸಾಧನೆ ಮಾಡಲು ಸಾಧ್ಯವಾಗುತ್ತದೆ. ಉತ್ತಮವಾಗಿ ಅಧ್ಯಯನ ಮಾಡಿ ಅತ್ಯುನ್ನತ ಹುದ್ದೆಗೆ ಅಲಂಕರಿಸಬಹುದು ಎಂದರು.

10ನೇ ತರಗತಿಯಲ್ಲಿ ನಿರ್ಸಗ ಶಂಕರ ದೇಸಾಯಿ (99.2), ಮಂಜುನಾಥ ಸೈದಪ್ಪ ಹೊಸಮನಿ (91), ಯಲ್ಲಮ್ಮ (90.2), ತಸಲೀಮ್ (88.3), ಆಶಾ (87.5) ಹಾಗೂ ಅಂಜುಮ (87) ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ.

ಪಿಯುಸಿ-2 ವಿಭಾಗದಲ್ಲಿ ಅವಿನಾಶ ಯಮನಪ್ಪ ಗುತ್ತೇದಾರ (96.6), ಶಶಿಕಾಂತ ಪೀರಯ್ಯ ಗುತ್ತೇದಾರ (93.3), ರೋಹಿತ ಬಸವರಾಜ ಶಿರಸಗಿ (89) ಹಾಗೂ ಜ್ಯೋತಿ ಗುರಪ್ಪ ಅವರಾದಿ (88) ಸಾಧನೆ ಮಾಡಿದ್ದಾರೆ. ಇವರ ಜೊತೆಗೆ ಸುಮಾರು 30 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಪಾಸಾದವರನ್ನು ಸನ್ಮಾನಿಸಲಾಯಿತು.

ಈ ವೇಳೆ ಇಜೇರಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಅಣ್ಣಾರಾಯ ಪಾಟೀಲ, ಲಾಲಯ್ಯ ಗುತ್ತೇದಾರ, ಶಿವಣ್ಣ ಗುಗ್ಗರಿ, ದೇವಣ್ಣ ಯಂಕಂಚಿ, ಅಂಬ್ರೇಶ ಲಿಂಗಸೂಗುರ ಸಾಹು, ಶಂಕರ ದೇಸಾಯಿ, ಅಮೀನಪ್ಪ ಹೊಸಮನಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಮಕಬುಲ್ ನಾಸಿ ಕಾರ್ಯಕ್ರಮ ನಿರೂಪಿಸಿದರು.



ದೇವಲಾಪುರದಲ್ಲಿ 33 ಜೋಡಿಗಳ ಉಚಿತ ಸಾಮೂಹಿಕ ವಿವಾಹ

ಬಳ್ಳಾರಿ / ಕಂಪ್ಲಿ,ಮೇ.04-

ಸಾಮೂಹಿಕ ವಿವಾಹ ಕಾರ್ಯಕ್ರಮಗಳಿಂದ ಬಡವರ ಆರ್ಥಿಕ ಹೊರೆ ತಗ್ಗುತ್ತದೆ. ಇದರಿಂದ ವರದಕ್ಷಿಣೆ ಪಿಡುಗು ಕಡಿಮೆಯಾಗುವ ಮೂಲಕ ಜೀವನ ಸುಮಧುರವಾಗಿರುತ್ತದೆ ಎಂದು ಶಾಸಕ ಜೆ.ಎನ್.ಗಣೇಶ ಹೇಳಿದರು.

ತಾಲೂಕಿನ ದೇವಲಾಪುರ ಗ್ರಾಮದಲ್ಲಿ ಕಂಡಲೇರು ಗೋತ್ರದ ನೀಲಿಗಿರಿಮಾನ್ಯ ಹಾಗೂ ನೀಲಿಗಿರಿಮಾನ್ಯ ಪಟ್ಟದ ದೇವರ ಕಾರ್ಯಕ್ರಮದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನೂತನ ವಧು-ವರರಿಗೆ ಆಶೀರ್ವಾದ ನೀಡಿ ಅವರು ಮಾತನಾಡಿದರು. ಪಟ್ಟದ ದೇವರ ಸನ್ನಿಧಾನದಲ್ಲಿ ಮದುವೆಯಾದವರು ಗುರುಹಿರಿಯರನ್ನು ಗೌರವಿಸುವ ಮೂಲಕ ಆದರ್ಶ ದಂಪತಿಗಳಾಗಿ ಬಾಳಬೇಕು ಎಂದು ಸಲಹೆ ನೀಡಿದರು. ಹರಿಗಿಡೋಣ ಅಭಿನವ ಸಿದ್ದಲಿಂಗಸ್ವಾಮಿ, ಒಡೆಯರು ಶರಣಯ್ಯ ಸ್ವಾಮಿ, ರೋಹಿತ್ ಸ್ವಾಮಿ, ಗುರುಲಿಂಗಯ್ಯ ಸ್ವಾಮಿ, ಅಮಾಜಯ್ಯ ಸ್ವಾಮಿ, ವಿರುಪಾಕ್ಷಯ್ಯ ಸ್ವಾಮಿ ಹಾಗೂ ಜಂಬಯ್ಯ ಸ್ವಾಮಿ ಅವರ ದಿವ್ಯ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಮತ್ತು ಸಾಮೂಹಿಕ ವಿವಾಹಗಳು ನೆರವೇರಿದವು. ಬೆಳಿಗ್ಗೆ ಸಕಲ ವಾದ್ಯ ವೈಭವಗಳೊಂದಿಗೆ ಗಂಗೆಪೂಜೆ ಹಾಗೂ ಮೆರವಣಿಗೆ ನಡೆಯಿತು. ನಂತರ ನಡೆದ ಸಾಮೂಹಿಕ ವಿವಾಹದಲ್ಲಿ 33 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಈ ಸಂದರ್ಭದಲ್ಲಿ ಮುಖಂಡರಾದ ಕೆ.ಶ್ರೀನಿವಾಸರಾವ್, ಮರೇಗೌಡ, ಅಂಜಿನಪ್ಪ, ವಿರೇಶಗೌಡ, ಲಿಂಗನಗೌಡ, ತಿಪ್ಪನಗೌಡ, ಸಿದ್ದಯ್ಯ, ಸುರೇಶಗೌಡ, ಉಮೇಶಗೌಡ ಸೇರಿದಂತೆ ಕಂಡಲೇರು ಗೋತ್ರದ ಸಹೋದರರು ಹಾಗೂ ಸ್ಥಳೀಯ ಗಣ್ಯರು ಭಾಗವಹಿಸಿದ್ದರು.



ಮಹಿಳಾ ಮೀಸಲಾತಿ ಜಾರಿಗೆ ಆಗ್ರಹಿಸಿ ಕಾಂಗ್ರೆಸ್‌ನಿಂದ ಪತ್ರ ಚಳುವಳಿ

ಕಲಬುರಗಿ,ಮೇ.04-

ಮಹಿಳಾ ಮೀಸಲಾತಿ ಮಸೂದೆ ತಕ್ಷಣ ಜಾರಿಗೊಳಿಸುವಂತೆ ಒತ್ತಾಯಿಸಿ ಕಲಬುರಗಿ ಜಿಲ್ಲಾ ಮಹಿಳಾ ಕಾಂಗ್ರೆಸ್ ವತಿಯಿಂದ ರವಿವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯುವ ವಿನೂತನ ಚಳುವಳಿ ನಡೆಸಲಾಯಿತು.

ನಗರದ ರೈಲ್ವೆ ಸ್ಟೇಷನ್ ಸಮೀಪದ ಅಂಚೆ ಕಚೇರಿ ಎದುರು ಜಮಾಯಿಸಿದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು, ನಾರಿ ಶಕ್ತಿ ವಂದನ್ ಮಸೂದೆ ಯಾವುದೇ ವಿಳಂಬವಿಲ್ಲದೆ ಜಾರಿಯಾಗಬೇಕು. ಜೊತೆಗೆ ಹಿಂದುಳಿದ ವರ್ಗದ () ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿ ಒದಗಿಸಬೇಕು ಎಂದು ಆಗ್ರಹಿಸಿ, ತಮ್ಮ ಮನವಿಗಳನ್ನು ಪತ್ರಗಳ ಮೂಲಕ ಕಳುಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರೇಣುಕಾ ಸಿಂಗೆ, ಮಹಿಳಾ ಮೀಸಲಾತಿ ಮಸೂದೆ ಪಾಸಾಗಿದೆ ಎಂದು ಹೇಳಿಕೊಂಡು ಕೇಂದ್ರ ಸರ್ಕಾರ ಮಹಿಳೆಯರಿಗೆ ಭರವಸೆ ನೀಡುತ್ತಿದ್ದರೂ, ಅದರ ಅನುಷ್ಠಾನಕ್ಕೆ ಡಿಲಿಮಿಟೇಶನ್ ಮತ್ತು ಜನಗಣತಿ ನೆಪವೊಡ್ಡುತ್ತಿರುವುದು ರಾಜಕೀಯ ಗಿಮಿಕ್ ಆಗಿದೆ ಎಂದು ಆರೋಪಿಸಿದರು. ಪ್ರಧಾನಿ ಮೋದಿ ಅವರ ಹೇಳಿಕೆಗಳು ನೈಜವಾಗಿಲ್ಲ, ಇದು ಮತ್ತೊಂದು ಗ್ರಾಂಡ್ ಸುಳ್ಳು ಎಂದು ಟೀಕಿಸಿದರು.

ಆರೆಸ್ಸೆಸ್‌ನ ಚಿಂತನೆಗಳ ಪ್ರಭಾವದಲ್ಲಿರುವ ಬಿಜೆಪಿ ಸರ್ಕಾರದಿಂದ ಮಹಿಳೆಯರಿಗೆ ಸಮಾನ ಹಕ್ಕುಗಳು ಸಿಗುವುದು ಅಸಾಧ್ಯ. ದಲಿತ ಮತ್ತು ಹಿಂದುಳಿದ ವರ್ಗದ ಮಹಿಳೆಯರನ್ನು ಕಡೆಗಣಿಸುವ ಧೋರಣೆ ಮುಂದುವರಿದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಮಹಿಳಾ ನಾಯಕಿಯರು ತಮ್ಮ ಸರ್ಕಾರದ ಯೋಜನೆಗಳಲ್ಲಿ ಯಾವುದು ಯಶಸ್ವಿಯಾಗಿದೆ ಎಂಬುದನ್ನು ಸಾರ್ವಜನಿಕವಾಗಿ ಸ್ಪಷ್ಟಪಡಿಸಲಿ ಎಂದು ಸವಾಲು ಹಾಕಿದರು.

ಈ ಪ್ರತಿಭಟನೆಯಲ್ಲಿ ಸಂಗೀತಾ ಪಾಟೀಲ್, ನಂದಾರೆಡ್ಡಿ, ಅನುರಾಧಾ ನಿನ್ನೆ, ಗೀತಾ ಮುದಗಲ್, ಜಯಶ್ರೀ ಚಿಂತಪಳ್ಳಿ, ಲಕ್ಷ್ಮಿ ಸರಸಂಬರ್, ಶಹನಾಜ್ ಅಕ್ತರ್ ಸಹೇರಾ ಬಾನು ಸೇರಿದಂತೆ ನೂರಾರು ಮಹಿಳಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ಮೊದಲ ಚುನಾವಣೆಯಲ್ಲೇ ಗೆದ್ದು ಬೀಗಿದ ಕಾಂಗ್ರೆಸ್‌ನ ಉಮೇಶ್ ಮೇಟಿ

ದಾಖಲೆಯನ್ನು ಉಮೇಶ್ ಮೇಟಿ ಮುರಿದಿದ್ದು, 2018ರಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ 15,934 ಮತಗಳ ಅಂತರದ ಗೆಲುವೇ ಕ್ಷೇತ್ರದಲ್ಲಿ ಈವರೆಗಿನ ಅತಿದೊಡ್ಡ ಮತಗಳ ಅಂತರವಾಗಿತ್ತು.

ತಂದೆ ಆತ್ಮಕ್ಕೆ ಶಾಂತಿ ಸಿಕ್ಕಿದೆ

ಬಾಗಲಕೋಟೆ ಉಪಚುನಾವಣೆಯಲ್ಲಿ ಉಮೇಶ್ ಮೇಟಿ ಜಯಭೇರಿ ಸಂಬಂಧ ಅವರ ಸಹೋದರ ಮಲ್ಲಿಕಾರ್ಜುನ ಮೇಟಿ ಟಿವಿ9 ಜೊತೆ ಸಂತಸ ಹಂಚಿಕೊಂಡಿದ್ದಾರೆ. ಇದೊಂದು ಭಾವುಕ ಕ್ಷಣವಾಗಿದ್ದು, ಈ ಗೆಲುವಿನಿಂದ ನಮ್ಮ ತಂದೆ ಆತ್ಮಕ್ಕೆ ಶಾಂತಿ ಸಿಕ್ಕ ಹಾಗಾಗಿದೆ. ನಮ್ಮ ತಂದೆ ಕೈ ಹಿಡಿದಿದ್ದ ಜನರು ಈಗ ನಮ್ಮ ಸಹೋದರನ ಕೈಯನ್ನೂ ಹಿಡಿದಿದ್ದಾರೆ. ಸಿಎಂ, ಸಚಿವರು ಮತ್ತು ಮತದಾರರಿಗೆ ಧನ್ಯವಾದ ಹೇಳೋದಾಗಿ ಅವರು ತಿಳಿಸಿದ್ದಾರೆ.

ವಿಜಯ್ ಸುನಾಮಿಗೆ ಕೊಚ್ಚಿಹೋದ ಡಿಎಂಕೆ ಕುಟುಂಬ ರಾಜಕೀಯ

ರಾಜಕೀಯ ಪಂಡಿತರೂ ಕೂಡ ಲೆಕ್ಕಾಚಾರ ಹಾಕಿರಲಿಲ್ಲ.ಇತ್ತೀಚೆಗೆ ಬಿಡುಗಡೆಯಾದ ಸಮೀಕ್ಷೆಗಳೂ ಕೂಡಾ ಡಿಎಂಕೆ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತದೆ ಎಂಬ ಭವಿಷ್ಯ ನುಡಿದಿದ್ದವು. ಆದರೆ ಪ್ರಕಟಗೊಂಡ ಫಲಿತಾಂಶದಲ್ಲಿ ಎಲ್ಲವೂ ತಿರುವುಮುರುವಾಗಿದೆ.

ಡಿಎಂಕೆ ಸೋಲಿಗೆ ಕಾರಣ ಹುಡುಕುತ್ತಾ ಹೋದರೆ ಅದಕ್ಕೆ ನೂರಾರು ನಿದರ್ಶನಗಳನ್ನು ನೀಡಬಹುದು ಎಂದು ಪಕ್ಷದ ಕಾರ್ಯಕರ್ತರೇ ಹೇಳುತ್ತಿದ್ದಾರೆ.

ವಿಜಯ್ ಅವರ ಟಿವಿಕೆ ಪಕ್ಷದ ಸುನಾಮಿ :

ನಟ ವಿಜಯ್ ಅವರ ಟಿವಿಕೆ ಪಕ್ಷವು ಡಿಎಂಕೆಯ ಸಾಂಪ್ರದಾಯಿಕ ಯುವ ಮತದಾರರನ್ನು ಮತ್ತು ಹೊಸ ಮತದಾರರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಇದು ಡಿಎಂಕೆಯ ವೋಟ್ ಬ್ಯಾಂಕ್ ಅನ್ನು ಸುಮಾರು ಶೇ.15 ರಿಂದ ಶೇ.20 ರಷ್ಟು ಕಬಳಿಸಿದ್ದು, ಮೈತ್ರಿಕೂಟದ ಗೆಲುವಿನ ಅಂತರವನ್ನು ಕಡಿಮೆ ಮಾಡಿದೆ.

ಆಡಳಿತ ವಿರೋಧಿ ಅಲೆ ಮತ್ತು ಭ್ರಷ್ಟಾಚಾರದ ಆರೋಪ :

ಕಳೆದ ಐದು ವರ್ಷಗಳ ಆಡಳಿತದಲ್ಲಿ ಸಚಿವರ ಮೇಲಿನ ಅಕ್ರಮ ಹಣ ವರ್ಗಾವಣೆ ಪ್ರಕರಣಗಳು ಮತ್ತು ಭ್ರಷ್ಟಾಚಾರದ ಆರೋಪಗಳನ್ನು ಪ್ರತಿಪಕ್ಷಗಳು ಸರಿಯಾಗಿ ಬಳಸಿಕೊಂಡಿವೆ. ಅದರಲ್ಲೂ ಕಾನೂನು ಸುವ್ಯವಸ್ಥೆ ಮತ್ತು ಬೆಲೆ ಏರಿಕೆ ವಿಚಾರಗಳು ಸಾಮಾನ್ಯ ಜನರ ಅಸಮಾಧಾನಕ್ಕೆ ಕಾರಣವಾಗಿವೆ.

ಮೈತ್ರಿಕೂಟದ ಒಳಗಿನ ಬಿರುಕು :

ಕಾಂಗ್ರೆಸ್ ಮತ್ತು ಡಿಎಂಕೆ ನಡುವೆ ಸೀಟು ಹಂಚಿಕೆ ವಿಚಾರದಲ್ಲಿ ಉಂಟಾದ ಭಿನ್ನಮತವು ಈ ಬಾರಿ ಬಹಿರಂಗವಾಗಿತ್ತು. ಕಾಂಗ್ರೆಸ್ ಹೆಚ್ಚಿನ ಸೀಟುಗಳಿಗೆ ಬೇಡಿಕೆ ಇಟ್ಟಿದ್ದರೂ ಡಿಎಂಕೆ ಕೇವಲ 25 ಸ್ಥಾನಗಳನ್ನು ನೀಡಿದ್ದು, ಇದು ಮೈತ್ರಿಕೂಟದ ಕಾರ್ಯಕರ್ತರ ನಡುವಿನ ಒಗ್ಗಟ್ಟಿನ ಮೇಲೆ ಪರಿಣಾಮ ಬೀರಿದೆ.

ಕುಟುಂಬ ರಾಜಕಾರಣದ ಟೀಕೆ :

ಉದಯನಿಧಿ ಸ್ಟಾಲಿನ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿದ್ದು ಮತ್ತು ಪಕ್ಷದಲ್ಲಿ ಕೇವಲ ಕುಟುಂಬದ ಸದಸ್ಯರಿಗೆ ಆದ್ಯತೆ ನೀಡಲಾಗುತ್ತಿದೆ ಎಂಬ ಆರೋಪವನ್ನು ವಿಜಯ್ ಮತ್ತು ಎಐಎಡಿಎಂಕೆ ಪ್ರಬಲವಾಗಿ ಪ್ರಚಾರ ಮಾಡಿದ್ದವು. ಇದು ತಟಸ್ಥ ಮತದಾರರನ್ನು ಪಕ್ಷದಿಂದ ದೂರ ಮಾಡಿದೆ.

ರೈತರ ಅಸಮಾಧಾನ :

ಕೃಷಿ ಉತ್ಪಾದನೆಯಲ್ಲಿನ ಇಳಿಕೆ (ವಿಶೇಷವಾಗಿ ಭತ್ತದ ಇಳುವರಿ) ಮತ್ತು ಡೆಲ್ಟಾ ಪ್ರದೇಶದ ರೈತರಿಗೆ ನೀಡಿದ ಭರವಸೆಗಳು ಈಡೇರದಿದ್ದಕ್ಕೆ ಗ್ರಾಮೀಣ ಭಾಗದ ಮತಗಳು ಈ ಬಾರಿ ಹಂಚಿಹೋಗಿವೆ.

ಸಾಮೂಹಿಕ ವಿವಾಹ, ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ

ತುಂಗಭದ್ರಾ ಕ್ರಸ್ಟ್ ಗೇಟ್ ಅಳವಡಿಕೆ ಪೂರ್ಣ: ಡಿ.ಕೆ.ಶಿ

ಶ್ರಮಿಸುತ್ತಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಐತಿಹಾಸಿಕ ಕಾರ್ಯಕ್ರಮ ಮಾಡಿದ್ದಾರೆ ಎಂದು ಪ್ರಶಂಸಿಸಿದರು.

ಈ ಕಾರ್ಯಕ್ರಮಕ್ಕೆ ಆಹ್ವಾನಿಸುವಾಗ ತುಂಗಭದ್ರಾ ಜಲಾಶಯ ಗೇಟ್ ಅಳವಡಿಕೆ ಪೂರ್ಣಗೊಂಡಿದೆ, ನೀವು ಬಂದು ಪರಿಶೀಲನೆ ಮಾಡಬೇಕು ಎಂದು ಬಸನಗೌಡರು ತಿಳಿಸಿದ್ದರು. ಇದರಿಂದ ಅವರ ರೈತಪರ ಕಾಳಜಿ ಸ್ಪಷ್ಟವಾಗುತ್ತದೆ ಎಂದು ಹೇಳಿದರು.

ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಮಾತನಾಡಿ, ಧಾರ್ಮಿಕ ನಂಬಿಕೆ ದೌರ್ಬಲ್ಯವಲ್ಲ, ಅದು ನಮ್ಮ ನೆಲದ ಸಂಸ್ಕೃತಿ ಎಂದರು.

ಸರ್ವಧರ್ಮ ಸಾಮೂಹಿಕ ವಿವಾಹ ಮತ್ತು ಉಡಿ ತುಂಬುವ ಕಾರ್ಯಕ್ರಮ ಆಯೋಜಿಸುವ ಮೂಲಕ ಬಸನಗೌಡ ಬಾದರ್ಲಿ ಈ ಮಣ್ಣಿನ ಶ್ರೀಮಂತಿಕೆಯನ್ನು ಗಟ್ಟಿಗೊಳಿಸಿ ದೇಶಕ್ಕೆ ಸಂದೇಶ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಎಲ್ಲರ ಪ್ರೀತಿ, ವಿಶ್ವಾಸ ಮತ್ತು ಒಗ್ಗಟ್ಟಿನಿಂದ ಮಾತ್ರ ದೇಶ ಕಟ್ಟಲು ಸಾಧ್ಯ. ಶ್ರೀಮಂತಿಕೆಯಿಂದ ಗೌರವ ಬರಲ್ಲ, ಒಗ್ಗಟ್ಟೇ ನಮ್ಮ ಶ್ರೀಮಂತಿಕೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಳಬಳ್ಳಾರಿಯ ಸಿದ್ದಲಿಂಗ ಮಹಾಸ್ವಾಮಿಗಳು ಸೇರಿ ವಿವಿಧ ಮಠಾಧೀಶರು, ಸಚಿವರಾದ ಶಿವಾನಂದ ಪಾಟೀಲ್, ಶಿವರಾಜ್ ತಂಗಡಗಿ, ಮಧು ಬಂಗಾರಪ್ಪ, ಆರ್.ಬಿ.ತಿಮ್ಮಾಪುರ, ಕೆ.ಹೆಚ್.ಮುನಿಯಪ್ಪ, ಎನ್.ಎಸ್.ಬೋಸರಾಜ, ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಹಂಪಯ್ಯ ನಾಯಕ, ಬಿ.ಎಂ.ನಾಗರಾಜ, ಪುಟ್ಟಣ್ಣನವರ್, ಶ್ರೀನಿವಾಸ, ಸೇರಿದಂತೆ ಶಾಸಕರು, ವಿಧಾನಪರಿಷತ್ ಶಾಸಕರು ಅನೇಕರು ಭಾಗವಹಿಸಿದ್ದರು.

ಕೇರಳ ಚುನಾವಣೆ: ದೇಶದಲ್ಲಿಯೇ ಎಡಪಕ್ಷದ ಅಂತ್ಯ, ಮುನ್ನಡೆ ಸಾಧಿಸಿದ ಯುಡಿಎಫ್

ತಿರುವನಂತಪುರಂ (ಕೇರಳ): ಎಪ್ರಿಲ್ 9 ರಂದು ನಡೆದ ವಿಧಾನಸಭಾ ಚುನಾವಣೆಯ ಮತ ಎಣಿಕೆ ವೇಗ ಪಡೆದುಕೊಂಡಿದೆ. ಸೋಮವಾರ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಭರ್ಜರಿ ಮುನ್ನಡೆ ಸಾಧಿಸುವ ಮೂಲಕ ಎಲ್‌ಡಿಎಫ್ ಸರ್ಕಾರವನ್ನು ಸೋಲಿ ಸಿದೆ. ಈ ಮೂಲಕ ಕೇರಳದಲ್ಲಿ ಮಾತ್ರವೇ ಅಸ್ತಿತ್ವದಲ್ಲಿದ್ದ ಕಮ್ಯೂನಿಸ್ಟ್ ಸರ್ಕಾರ ಅಂತ್ಯವಾಗಿದೆ.



ಎಕ್ಸಿಟ್ ಪೋಲ್ ಮುನ್ಸೂಚನೆಗಳಿಗೆ ಅನುಗುಣವಾಗಿ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಸ್ಪಷ್ಟ ಮುನ್ನಡೆ ಸಿಗುವ ಮುನ್ಸೂಚನೆ ಆರಂಭಿಕ ಟ್ರೆಂಡ್‌ಗಳಿಂದ ತಿಳಿದುಬಂದಿದೆ.

ಮೊದಲ ಕೆಲವು ಸುತ್ತಿನ ಎಣಿಕೆಯ ನಂತರ, ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ 140 ವಿಧಾನಸಭಾ ಸ್ಥಾನಗಳ ಪೈಕಿ 100 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದ್ದರೆ, ಸಿಪಿಐ(ಎಂ) ನೇತೃತ್ವದ ಆಡಳಿತಾರೂಢ ಎಡ ಡೆಮಾಕ್ರಟಿಕ್ ಫ್ರಂಟ್ (ಎಲ್‌ಡಿಎಫ್) ಕೇವಲ 40 ಕ್ಷೇತ್ರಗಳಲ್ಲಿ ಮಾತ್ರ ಮುಂದಿತ್ತು.

ಇದೀಗ ಯುಡಿಎಫ್‌ಗೆ 99, ಎಲ್‌ಡಿಎಫ್‌ಗೆ 38, ಹಾಗೂ ಎನ್‌ಡಿಎ 3 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ.

ಈ ಫಲಿತಾಂಶ ಆಡಳಿತ ಪಕ್ಷಕ್ಕೆ ಹಿನ್ನಡೆಯನ್ನು ಸೂಚಿಸುತ್ತದೆ. ಕನಿಷ್ಠ ಒಂದು ಡಜನ್ ಸಚಿವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹಿನ್ನಡೆ ಅನುಭವಿಸಿದ್ದಾರೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕಣ್ಣೂರು ಜಿಲ್ಲೆಯಲ್ಲಿ ತಮ್ಮ ಸಾಂಪ್ರದಾಯಿಕ ಭದ್ರಕೋಟೆಯಾದ ಧರ್ಮಡಂನಲ್ಲಿ ಆರಂಭಿಕ ಸುತ್ತುಗಳಲ್ಲಿಯೇ ಹಿಂದುಳಿದಿದ್ದರು.

ಆರಂಭಿಕ ಸೋಲನ್ನು ಎದುರಿಸುತ್ತಿರುವ ಇತರೆ ಸಚಿವರಲ್ಲಿ ವೀಣಾ ಜಾರ್ಜ್, ಎಂ. ಬಿ. ರಾಜೇಶ್, ಒ. ಆರ್. ಕೇಲು, ಆರ್ ಬಿಂಧು, ಜೆ. ಚಿಂಚುರಾಣಿ, ಪಿ. ರಾಜೀವ್, ಕೆ. ಬಿ. ಗಣೇಶ್ ಕುಮಾರ್, ವಿ. ಎನ್. ವಾಸವನ್, ವಿ. ಶಿವನ್‌ಕುಟ್ಟಿ, ವಿ ಅಬ್ದುರಹಿಮಾನ್, ಕಾಡನ್ನಪ್ಪಲ್ಲಿ ರಾಮಚಂದ್ರನ್, ಎ. ಕೆ. ಸಸೀಂದ್ರನ್ ಮತ್ತು ರೋಶಿ ಆಗಸ್ಟಿನ್ ಸೇರಿದ್ದಾರೆ.

ದೂರದರ್ಶನ ವರದಿಗಳ ಪ್ರಕಾರ, ಎಲ್‌ಡಿಎಫ್ ಸಂಚಾ ಲಕ ಟಿ. ಪಿ. ರಾಮಕೃಷ್ಣನ್ ಅವರು ಕೋಝಿ ಕ್ಕೋಡ್ ಜಿಲ್ಲೆಯ ತಮ್ಮ ಹಾಲಿ ಕ್ಷೇತ್ರ ಪೆರಂಬ್ರಾದದಲ್ಲಿ ಹಿನ್ನಡೆ ಅನುಭವಿಸಿ ದ್ದಾರೆ.

ವಿಜಯನ್ ನೇತೃತ್ವದಲ್ಲಿ ಸತತ ಎರಡು ಅವಧಿಗೆ ಅಧಿಕಾರದಲ್ಲಿರುವ ಸಿಪಿಐ(ಎಂ) ನೇತೃತ್ವದ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಮಹತ್ವದ ಪಾತ್ರ ವಹಿಸಿದೆ.

ಆಡಳಿತದಲ್ಲಿ ಭ್ರಷ್ಟಾಚಾರ, ವಂಶಪಾರಂಪರ್ಯ ಸ್ವಜನಪಕ್ಷಪಾತದ ಆರೋಪಗಳ ಬಗ್ಗೆ ವಿರೋಧ ಪಕ್ಷಗಳಿಂದ ಪದೇ ಪದೇ ಆರೋಪಗಳು ಕೇಳಿ ಬರುತ್ತಿದ್ದರಿಂದಾಗಿ, ಹಲವಾರು ಕ್ಷೇತ್ರಗಳ ಮತದಾರರು ಹಾಲಿ ಆಡಳಿತದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವುದು ಇದರಿಂದ ತಿಳಿದುಬರುತ್ತಿದೆ.

ಕೇರಳದ ಚುನಾವಣಾ ರಾಜಕೀಯದಲ್ಲಿ ಸಾಂಪ್ರದಾಯಿಕವಾಗಿ ನಿರ್ಣಾಯಕ ಪಕ್ಷವಾಗಿ ಕಾರ್ಯನಿರ್ವಹಿಸುವ ಅನೇಕ ಪ್ರದೇಶಗಳಲ್ಲಿ ಅಲ್ಪಸಂಖ್ಯಾತ ಮತಗಳ ಕ್ರೋಢೀಕರಣದಿಂದ ಯುಡಿಎಫ್ ಪ್ರಯೋಜನ ಪಡೆದಿರುವುದು ಫಲಿತಾಂಶದಲ್ಲಿ ಕಂಡುಬರುತ್ತಿದೆ.

ಗಮನಾರ್ಹ ಬೆಳವಣಿಗೆಯೊಂದರಲ್ಲಿ, ಸಿಪಿಐ(ಎಂ) ಅಭ್ಯರ್ಥಿ ಇ. ಟಿ. ಟೈಸನ್ ಆರಂಭಿಕ ಮುನ್ನಡೆ ಸಾಧಿಸಿದ್ದ ಉತ್ತರ ಪರವೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಹಿರಿಯ ಮತ್ತು ವಿರೋಧ ಪಕ್ಷದ ನಾಯಕ ವಿ.ಡಿ. ಸತೀಸನ್ ಹಿನ್ನಡೆಯಲ್ಲಿದ್ದಾರೆ. ಅದಾಗ್ಯೂ, ರಾಷ್ಟ್ರೀಯ ಪಕ್ಷಕ್ಕೆ ಅನುಕೂಲಕರವಾದ ಕ್ಷೇತ್ರಗಳಲ್ಲಿ ಎಣಿಕೆ ಮುಂದುವರೆದಂತೆ ಸತೀಸನ್ ಚೇತರಿಕೆ ಕಂಡಿದ್ದಾರೆ.

ಕಲಬುರಗಿಯಲ್ಲಿ ಯುವಕರ ಕೋಕೋಪೀಟ್ ಉತ್ಪಾದನೆಗೆ ಜಿಲ್ಲಾಡಳಿತ ಮೆಚ್ಚುಗೆ

ಕಲಬುರಗಿ,ಮೇ.04-

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೃಷಿ ಆಧಾರಿತ ಉದ್ಯಮಶೀಲತೆಗೆ ಉತ್ತೇಜನ ನೀಡುವ ಮಹತ್ವದ ಹೆಜ್ಜೆಯಾಗಿ, ಕಲಬುರಗಿಯಲ್ಲಿ ಯುವ ಉದ್ಯಮಿಗಳು ಸ್ಥಾಪಿಸಿರುವ ಕೋಕೋಪೀಟ್ ಉತ್ಪಾದನಾ ಘಟಕ ಜಿಲ್ಲಾಡಳಿತದ ಮೆಚ್ಚುಗೆಗೆ ಪಾತ್ರವಾಗಿದೆ.

ನಿರ್ಗಮಿತ ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್ ಹಾಗೂ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸಮದ್ ಪಟೇಲ್ ಅವರು ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟಕದ ಕಾರ್ಯವಿಧಾನವನ್ನು ಅವಲೋಕಿಸಿದ ಅವರು ಯುವಕರ ಹೊಸ ಆಲೋಚನೆ ಮತ್ತು ಉದ್ಯಮಶೀಲತೆಯನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ನಿರ್ಗಮಿತ ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್, ಯುವಕರು ಕೇವಲ ಉದ್ಯೋಗ ಹುಡುಕುವವರಾಗದೆ, ಉದ್ಯೋಗ ಸೃಷ್ಟಿಸುವ ಉದ್ಯಮಿಗಳಾಗಬೇಕು. ಇಂತಹ ಪ್ರಯತ್ನಗಳು ಸ್ಥಳೀಯ ಆರ್ಥಿಕಾಭಿವೃದ್ಧಿಗೆ ಪೂರಕವಾಗುವುದರ ಜೊತೆಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತವೆ ಎಂದು ಹೇಳಿದರು.

ಈ ಕೋಕೋಪೀಟ್ ಉತ್ಪಾದನಾ ಘಟಕವನ್ನು ಇಗಲ ಎಕ್ಸಿಮ್ ಸಂಸ್ಥೆಯ ರಮೇಶ್ ಸ್ವಾಮಿ ಮುನ್ನಡೆಸುತ್ತಿದ್ದು, ನಿಸರ್ಗ ರೂಟ್ಸ್ ಮೂಲಕ ಜಗದೀಶ ಗಾಜರೆ ಹಾಗೂ ರಮೇಶ್ ಕಡಗಂಚಿ ಅವರು ಅಷ್ಟಮ ಟ್ರೇಡಿಂಗ್, ಪುಣೆ ಸಹಯೋಗದಲ್ಲಿ ರಫ್ತು ಕಾರ್ಯ ನಿರ್ವಹಿಸುತ್ತಿದ್ದಾರೆ.

ಉತ್ಪಾದನೆಯಾದ ಉತ್ತಮ ಗುಣಮಟ್ಟದ



ಕೋಕೋಪೀಟ್ ಅನ್ನು ಅಮೆರಿಕಾ, ಯುನೈಟೆಡ್ ಕಿಂಗ್‌ಡಮ್, ಮಧ್ಯಪ್ರಾಚ್ಯ ಹಾಗೂ ನೆದರ್‌ಲ್ಯಾಂಡ್ಸ್ ದೇಶಗಳಿಗೆ ರಫ್ತು ಮಾಡುವ ಗುರಿಯನ್ನು ಸಂಸ್ಥೆ ಹೊಂದಿದೆ.

ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಮಾತನಾಡಿ, ಕಲಬುರಗಿ ಮತ್ತು ಕಲ್ಯಾಣ ಕರ್ನಾಟಕ ಭಾಗದ ಯುವಕರು ಕೃಷಿ ಆಧಾರಿತ ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಕೃಷಿ ಇಲಾಖೆ ಸಂಪೂರ್ಣ ಬೆಂಬಲ ನೀಡಲಿದೆ. ಸ್ಥಳೀಯ ಉತ್ಪನ್ನಗಳನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಕಲಬುರಗಿ ರೊಟ್ಟಿ ಯೋಜನೆ ಯಶಸ್ವಿ ಉದಾಹರಣೆ ಎಂದು ಹೇಳಿದರು.

ಸಾಮಾನ್ಯವಾಗಿ ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಹೆಚ್ಚಾಗಿ ಕಂಡುಬರುವ ಕೋಕೋಪೀಟ್ ಉದ್ಯಮವನ್ನು ಕಲಬುರಗಿಯ ಯುವಕರು ಹೊಸ ಆಲೋಚನೆಯೊಂದಿಗೆ ಆರಂಭಿಸಿರುವುದು ಗಮನಾರ್ಹವಾಗಿದೆ. ತ್ಯಾಜ್ಯವನ್ನು ಸಂಪನ್ಮೂಲವನ್ನಾಗಿ ಪರಿವರ್ತಿಸುವ ''ಕಸದಿಂದ ರಸ'' ಪರಿಕಲ್ಪನೆಯನ್ನು ಅಳವಡಿಸಿಕೊಂಡಿರುವುದು ವಿಶೇಷವಾಗಿದೆ.

ಬುದ್ಧರ ಮಾರ್ಗದಲ್ಲಿ ನಡೆಯಬೇಕು: ಪಂಚಾಕ್ಷರಿ ಸ್ವಾಮೀಜಿ



ಹುಲಸೂರ್, ಮೇ..04-

ಬುದ್ಧರು ವಿಶ್ವಕ್ಕೆ ಶಾಂತಿಯ ಮಾರ್ಗ ತೋರಿಸಿದ್ದಾರೆ. ನಾವೆಲ್ಲರೂ ಅವರ ಮಾರ್ಗದಲ್ಲಿ ನಡೆಯಬೇಕಾಗಿದೆ ಎಂದು ಉರಿಲಿಂಗ ಪೆದ್ದಿ ಮಠದ ಪೀಠಾಧಿಪತಿ ಪಂಚಾಕ್ಷರಿ ಸ್ವಾಮೀಜಿ ಹೇಳಿದರು.

ತಾಲೂಕಿನ ಬೇಲೂರು ಗ್ರಾಮದ ಶರಣ ಉರಿಲಿಂಗ ಪೆದ್ದಿ ಮಠದಲ್ಲಿ ಶರಣ ಉರಿಲಿಂಗ ಪೆದ್ದಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಬುದ್ಧ ಪೂರ್ಣಿಮೆ ಅಂಗವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣ ರಾದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಆಯೋಜಿಸಲಾಗಿತ್ತು. ಈ ವೇಳೆ ಅವರು ಮಾತನಾಡಿ ದರು. ವಿದ್ಯಾರ್ಥಿಗಳು ತಥಾಗತ ಗೌತಮ ಬುದ್ಧರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರು ತೋರಿದ ಮಾರ್ಗದಲ್ಲಿ ಸಾಗಬೇಕು ಎಂದು ಹೇಳಿದರು.

ಬೇಲೂರು ಶರಣರ ನಾಡಾಗಿದ್ದು, ಇಲ್ಲಿ ಶೈಕ್ಷಣಿಕ ಕ್ರಾಂತಿ ನಡೆಯುತ್ತಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಮಾಡಿ ಭವಿಷ್ಯದಲ್ಲಿ ಉನ್ನತ ಹುದ್ದೆಗಳನ್ನು ಪಡೆದು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ಅವರು, ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ತಹಸೀಲ್ದಾರ್ ಶಿವಾನಂದ್ ಮೇತ್ರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಉರಿಲಿಂಗ ಪೆದ್ದಿ ಮಠದ ಆಶ್ರಯದಲ್ಲಿ ಬೇಲೂರು ರಾಜ್ಯದಾದ್ಯಂತ ಹೆಸರುವಾಸಿಯಾಗಿದ್ದು, ವಿದ್ಯಾರ್ಥಿಗಳು ಹಾಗೂ ಪೋಷಕರು ಸನ್ಮಾರ್ಗದತ್ತ ಸಾಗುತ್ತಿರುವುದು ಶ್ಲಾಘನೀಯ ಎಂದು ಹರ್ಷ ವ್ಯಕ್ತಪಡಿಸಿದರು.

ಬೇಲೂರು ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರು ಬಸಪ್ಪ ಬಿರಾದಾರ್ ಮಾತನಾಡಿ, 25 ವರ್ಷಗಳ ಬಳಿಕ ಶಾಲೆಗೆ ಶೇ.100 ಫಲಿತಾಂಶ ಸಾಧನೆ ಸಾಧ್ಯವಾಗಿದೆ. ಇದಕ್ಕೆ ವಿದ್ಯಾರ್ಥಿಗಳು ಹಾಗೂ ಪಾಲಕರ ಶ್ರಮವೇ ಪ್ರಮುಖ ಕಾರಣವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹುಲಸೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಹಾದೇವ್ ಜಮ್ಮು, ಶಿಕ್ಷಕ ಸಂಜೀವಕುಮಾರ್ ನಡುರ್ಕ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಸಪ್ಪ ಖಿಡ್ಡೆ, ನ್ಯಾಯವಾದಿ ಸಂಜೀವಕುಮಾರ್ ಖೇಲೆ, ಶರಣಪ್ಪ ಗದಲೇಗಾಂವ್, ಗುರುನಾಥ್ ವಾಗ್ಮಾರೆ ಹಾಗೂ ಅಶೋಕ್ ರಾಜೋಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಭಿಮಶಾ ವಾಗ್ಮಾರೆ ಸ್ವಾಗತಿಸಿದರು. ಮಹಾಲಿಂಗ್ ದೇವರು ನಿರೂಪಿಸಿದರು. ಗಣೇಶ ರಾಥು ವಂದಿಸಿದರು.



ಅಫಜಲಪುರ ತಾಲೂಕು ಶಿಕ್ಷಕರ ಸಂಘದ ಚುನಾವಣೆ ಫಲಿತಾಂಶ ಪ್ರಕಟ : ಗಾಂಧಿ ತಂಡಕ್ಕೆ ಭರ್ಜರಿ ಜಯ

ಅಫಜಲಪುರ ,ಮೇ.04-

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಫಜಲಪುರ ತಾಲೂಕು ಸಮಿತಿ (202631) ಅವಧಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಗಾಂಧಿ ದಪೇದಾರ್ ಹಾಗೂ ಸಂಗಮನಾಥ ಮ್ಯಾಳೇಶಿ ನೇತೃತ್ವದ ತಂಡಕ್ಕೆ ಭರ್ಜರಿ ಜಯ ದೊರತಿದೆ.

ಚುನಾವಣೆಯಲ್ಲಿ ತಾಲೂಕಿನ ವಿವಿಧ ಶಾಲೆಗಳ ಶಿಕ್ಷಕರು ಉತ್ಸಾ ಹದಿಂದ ಭಾಗವಹಿಸಿದ್ದು,ಹೆಚ್ಚಿನ ಪ್ರಮಾಣದ ಮತದಾನ ದಾಖಲಾಗಿತ್ತು. ಸಮಾನ ಮನಸ್ಕರ ಕ್ರಿಯಾಶೀಲ ತಂಡದ ಅಭ್ಯರ್ಥಿಗಳು ಬಹುಮತದೊಂದಿಗೆ ಜಯ ಸಾಧಿಸಿದ್ದಾರೆ.

ಗಾಂಧಿ ದಪೇದಾರ್-384, ಶಿವಾನಂದ ಪೂಜಾರಿ-363, ಸಂಗಮನಾಥ ಮ್ಯಾಳೇಸಿ-356, ಗುರುಶಾಂತಯ್ಯ ಹಿರೇಮಠ -320, ಸುಭಾಸ್ ಬಾಬುರಾವ-318, ಸಂಗಣ್ಣ ಸೊರಗೊಂಡ್-317, ಭೀಮಾಶ್ಯ ವಾಯಿ-296, ಹುಸೇನಸಾಬ್ ಮುಜಾವರ್ 292, ಸಂಜೀವ ಸಿಂದಗಿ-281, ಮಹಿಳಾ ಮೀಸಲಾತಿಯಲ್ಲಿ ಮಹಾನಂದ ಹೆಗ್ಗಿ- 394, ಶ್ರೀದೇವಿ ವಾಳಿ-314, ಜಯಶ್ರೀ ಕೊಪ್ಪ-307, ವನಿತಾ ಚವ್ಹಾಣ- 241 ಮತಗಳನ್ನು ಪಡೆದುಕೊಂಡು ಭರ್ಜರಿ ಜಯ ಸಾಧಿಸಿದ್ದಾರೆ.

ಫಲಿತಾಂಶ ಪ್ರಕಟವಾದ ಬಳಿಕ ವಿಜೇತ ಅಭ್ಯರ್ಥಿಗಳನ್ನು ಬೆಂಬಲಿಗರು ಹರ್ಷೋದ್ಗಾರಗಳೊಂದಿಗೆ ಅಭಿನಂದಿಸಿದರು. ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು. ಗೆಲುವಿನ ಬಳಿಕ ಮಾತನಾಡಿದ ಗಾಂಧಿ ದಪೇದಾರ್ ಅವರು, ತಾಲೂಕಿನ ಶಿಕ್ಷಕರ ಬಳಗವು ಸಮಾನ ಮನಸ್ಕರ ತಂಡಕ್ಕೆ ಸಂಪೂರ್ಣ ಬೆಂಬಲ ನೀಡಿದ್ದಾರೆ. ಶಿಕ್ಷಕರ ಹಕ್ಕುಗಳ ರಕ್ಷಣೆ, ಸೇವಾ ಸಮಸ್ಯೆಗಳ ಪರಿಹಾರ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು. ಹುಸೇನಸಾಬ ಮುಜಾವರ ಮಾತನಾಡಿ, ನಮ್ಮ ತಂಡದ ಮೇಲೆ ಭರವಸೆ ಇಟ್ಟು ಮತದಾನ ಮಾಡಿದ್ದಕ್ಕಾಗಿ ನಾವು ಚಿರಋಣಿಯಾಗಿದ್ದೇವೆ. ಮುಂದಿನ ದಿನಗಳಲ್ಲಿ ಶಿಕ್ಷಕರ ಶ್ರೇಯೋಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ ಎಂದರು.



ಕಲಬುರಗಿಯಲ್ಲಿ ಯಶಸ್ವಿಯಾಗಿ ನಡೆದ ನೀಟ್ -2026 ಪರೀಕ್ಷೆ

ಕಲಬುರಗಿ,ಮೇ.04-

ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ರಾಷ್ಟ್ರಮಟ್ಟದ ನೀಟ್-2026 ಪರೀಕ್ಷೆ ರವಿವಾರ ದೇಶಾದ್ಯಂತ ನಡೆಯಿತು. ಕಲಬುರಗಿಯ ಜೇವರ್ಗಿ ಕಾಲನಿಯಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಪರೀಕ್ಷೆ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಶಾಂತಿಯುತವಾಗಿ ನೆರವೇರಿತು.


ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಗಳಿಗೆ ಪ್ರವೇಶ ನೀಡುವ ಮುನ್ನ ಸೂಕ್ಷ್ಮವಾಗಿ ಪರಿಶೀಲನೆ ನಡೆಸಲಾಯಿತು. ಗುರುತಿನ ಚೀಟಿ, ಪ್ರವೇಶ ಪತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ಪರಿಶೀಲಿಸಿದ ಬಳಿಕವೇ ವಿದ್ಯಾರ್ಥಿಗಳಿಗೆ ಕೇಂದ್ರದೊಳಗೆ ಪ್ರವೇಶಿಸಲು ಅವಕಾಶ ನೀಡಲಾಯಿತು.

ಯಾವುದೇ ಅಕ್ರಮ ಚಟುವಟಿಕೆ ನಡೆಯದಂತೆ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಲಾಗಿದ್ದು, ಪರೀಕ್ಷಾ ಕೇಂದ್ರದ ಸುತ್ತಮುತ್ತ ಭದ್ರತಾ ವ್ಯವಸ್ಥೆ ಬಿಗಿಗೊಳಿಸಲಾಗಿತ್ತು.

ಅಧಿಕಾರಿಗಳು ಹಾಗೂ ಸಿಬ್ಬಂದಿ ಪರೀಕ್ಷೆಯ ಸುಸೂತ್ರ ನಿರ್ವಹಣೆಗೆ ವಿಶೇಷ ಕಾಳಜಿ ವಹಿಸಿದರು. ಅಭ್ಯರ್ಥಿಗಳು ಸಮಯಕ್ಕೆ ಸರಿಯಾಗಿ ಕೇಂದ್ರಕ್ಕೆ ಆಗಮಿಸಿ ನಿಯಮಾನುಸಾರ ಪರೀಕ್ಷೆಗೆ ಹಾಜರಾದರು.

ಒಟ್ಟಾರೆ ಯಾವುದೇ ಅಡಚಣೆಗಳಿಲ್ಲದೆ ನೀಟ್ 2026 ಪರೀಕ್ಷೆ ಶಾಂತಿಯುತವಾಗಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಖ್ವಾಜಾ ಬಂದೇ ನವಾಝ್ ಉರೂಸ್ : ಇಂಡಸ್ಟ್ರಿಯಲ್ ಎಗ್ಸಿ ಬಿಷನ್ ಉದ್ಘಾಟನೆ



ಕಲಬುರಗಿ,ಮೇ.04-

ನಗರದ ದರ್ಗಾ ಹಝರತ್ ಖ್ವಾಜಾ ಬಂದೇ ನವಾಝ್ ರಹಮತುಲ್ಲಾಹ್ ಅಲೈಹ್ ಅವರ 622ನೇ ಉರೂಸ್ ಶರೀಫ್ ಅಂಗವಾಗಿ ಆಲ್ ಇಂಡಿಯಾ ಇಂಡಸ್ಟ್ರಿಯಲ್ ಎಗ್ಸಿ ಬಿಷನ್‌ನ್ನು ಭವ್ಯವಾಗಿ ಉದ್ಘಾಟಿಸಲಾಯಿತು.

ಈ ಸಮಾರಂಭದ ಅಧ್ಯಕ್ಷತೆಯನ್ನು ಸಜ್ಜಾದಾ ನಶೀನ್ ಹಜರತ್ ಡಾ.ಹಾಫಿಜ್ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೈನಿ ಸಾಹೇಬ್ ಅವರು ವಹಿಸಿದ್ದರು. ವಿಶೇಷ ಅತಿಥಿಗಳಾಗಿ ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕರಾದ ಅಲ್ಲಂಪ್ರಭು ಪಾಟೀಲ್, ಕುಡಾ ಅಧ್ಯಕ್ಷರಾದ ಜನಾಬ್ ಮಜ್ಹರ್ ಅಲ್ಲಂ ಖಾನ್ ಭಾಗವಹಿಸಿದರು. ಕಾರ್ಯಕ್ರಮದ ವೇಳೆ ಹಜರತ್ ಡಾ. ಹಾಫಿಜ್ ಮುಹಮ್ಮದ್ ಅಲಿ ಅಲ್ ಹುಸೈನಿ ಸಾಹೇಬ್ ಅವರು ಇಬ್ಬರು ಗಣ್ಯ ಅತಿಥಿಗಳನ್ನು ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ದರ್ಗಾ ಶರೀಫ್ ಕಾರ್ಯದರ್ಶಿಗಳಾದ ಜನಾಬ್ ಅಬ್ದುಲ್ ಬಸಿತ್ ಸಾಹೇಬ್ ಅವರು ಎಲ್ಲ ಗಣ್ಯ ಅತಿಥಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.

ಇದಾದ ಬಳಿಕ ಎಗ್ಸಿ ಬಿಷನ್‌ನ ವಿವಿಧ ಪ್ರಮುಖ ಸ್ಟಾಲ್‌ಗಳನ್ನು ವೀಕ್ಷಿಸಲಾಯಿತು. ಈ ಸಂದರ್ಭದಲ್ಲಿ ವ್ಯಾಪಾರಿಗಳು ಹೂಮಾಲೆ ಹಾಗೂ ಶಾಲುಗಳನ್ನು ಅರ್ಪಿಸಿ ಅತಿಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಡಾ.ಸೈಯದ್ ಮುಸ್ತಫಾ ಹುಸೈನಿ ಸಾಹೇಬ್, ಸೈಯದ್ ಶಾಹ್ ತುಖಿಯುಲ್ಲಾ ಹುಸೈನಿ ಸಾಹೇಬ್, ಸೈಯದ್ ಮೊಹಮ್ಮದ್ ಹುಸೈನಿ ಸಾಹೇಬ್, ಸೈಯದ್ ಶಾಹ್ ಮುರ್ತುಜಾ ಹುಸೈನಿ ಸಾಹೇಬ್, ಸೈಯದ್ ಅಕೀಬ್ ಹುಸೈನಿ ಸಾಹೇಬ್, ಮಿರ್ ರೌಫ್ ಅಲಿ ಖಾನ್ ಸೇರಿದಂತೆ ಖಾನ್ವಾಡಾ-ಎ-ಬಂದೇನವಾಜ್ ಕುಟುಂಬದ ಅನೇಕರು ಉಪಸ್ಥಿತರಿದ್ದರು.

ಇದೇ ವೇಳೆ ಕಾರ್ಪೊರೇಟರ್ ಖುಸ್ರೋ ಜಾಗೀರ್ದಾರ, ಮಜ್ಹರ್ ಹುಸೇನ್, ಸಜ್ಜಾದ್ ಹುಸೇನ್ ಮನಿಯಾಲ್, ಡಾ.ಮಜೀದ್ ದಾಗಿ ಸೇರಿದಂತೆ ಉಲಮಾ, ಮಶಾಯಿಖ್, ಮುರೀದೀನ್, ಪಂಡಿತರು, ವೈದ್ಯರು, ಕಾರ್ಪೊರೇಟರ್‌ಗಳು ಹಾಗೂ ನಗರ ಮತ್ತು ಸುತ್ತಮುತ್ತಲಿನ ಸಾವಿರಾರು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಕೊಣಸಿರಸಗಿ ಗ್ರಾಮದಲ್ಲಿ ಜಾನುವಾರು ಆರೋಗ್ಯ ಶಿಬಿರ

ಯಡ್ರಾಮಿ,ಮೇ.04-

ರೈತರು ಜಾನುವಾರು ಆರೋಗ್ಯ ಶಿಬಿರ ಹಾಗೂ ಕಾಲುಬಾಯಿ ಜ್ವರದ ಲಸಿಕಾ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಮುಖ್ಯ ಪಶುವೈದ್ಯಾಧಿಕಾರಿ ಡಾ.ಪ್ರಭು ಕಲ್ಲೂರ ಎಂದರು.

ತಾಲೂಕಿನ ಕೊಣಸಿರಸಗಿ ಗ್ರಾಮದಲ್ಲಿ ಜಾನುವಾರು ಆರೋಗ್ಯ ಶಿಬಿರ ಹಾಗೂ 9ನೇ ಸುತ್ತಿನ ಕಾಲುಬಾಯಿ ಜ್ವರ (ಊಖಆ) ಲಸಿಕಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಕೃಷಿಯ ಜೊತೆಗೆ ವೈಜ್ಞಾನಿಕ ಹೈನುಗಾರಿಕೆ ಹಾಗೂ ಕುರಿ/ಮೇಕೆ ಸಾಕಾಣಿಕೆಯನ್ನು ಅಳವಡಿಸಿಕೊಳ್ಳುವುದು ರೈತರ ಆದಾಯವನ್ನು ಹೆಚ್ಚಿಸಲು ಸಹಕಾರಿ ಎಂದು ತಿಳಿಸಿದರು. ಶಿಬಿರದ ಅಂಗವಾಗಿ ಜಾನು ವಾರುಗಳ ಆರೋಗ್ಯ ತಪಾಸಣೆ, ಚಿಕಿತ್ಸೆ ಮತ್ತು ಚರ್ಮಗಂಟು ರೋಗದ ವಿರುದ್ಧ ಲಸಿಕೆ ಹಾಕಲಾಯಿತು. ಬೇಸಿಗೆ ಕಾಲದಲ್ಲಿ ಜಾನುವಾರುಗಳ ನಿರ್ವಹಣೆ, ಕುರಿಗಾರರಿಗೆ ಉಚಿತವಾಗಿ ಜಂತುನಾಶಕ ಔಷಧಿಗಳನ್ನು ವಿತರಿಸಲಾಯಿತು.

ನಿಮ್ಮೂರು ಸುದ್ದಿ

ಸಂಪಾದಕೀಯ

ಮೇ ಕ್ರಾಂತಿಯ ಬಲೂನಿಗೆ ಸೂಜಿ ಚುಚ್ಚಿದ ಖರ್ಗೆ



ಕಳೆದ ವರ್ಷ ನವೆಂಬರ್ ಕ್ರಾಂತಿ ರಾಜ್ಯ ರಾಜಕೀಯದಲ್ಲಿ ಸದ್ದು ಮಾಡಿತ್ತು. ನವೆಂಬರ್ ತಿಂಗಳಲ್ಲಿ ಸರಕಾರದೊಳಗೆ ಭಾರೀ ಬದಲಾವಣೆಗಳಾಗುತ್ತವೆ ಎಂದು ಮಾಧ್ಯಮಗಳು ಭವಿಷ್ಯ ನುಡಿದಿದ್ದವು. ಅದಕ್ಕೆ ಪುಷ್ಟಿ ನೀಡುವಂತೆ ಕಾಂಗ್ರೆಸ್ ಪಕ್ಷದೊಳಗಿರುವ ಕೆಲವು ನಾಯಕರ ಹೇಳಿಕೆಗಳು ಈ ನವೆಂಬರ್ ಕ್ರಾಂತಿಗೆ ರೆಕ್ಕೆಪುಕ್ಕಗಳನ್ನು ನೀಡಿತ್ತು. ಆದರೆ ನವೆಂಬ,ರ್ ಡಿಸೆಂಬರ್ ಮುಗಿದು ಹೊಸ ವರ್ಷ ಕಾಲಿಟ್ಟರೂ ಮಾಧ್ಯಮಗಳು ನಿರೀಕ್ಷಿಸಿದ ಕ್ರಾಂತಿಯ ದಿನ ರಾಜ್ಯದ ಪಾಲಿಗೆ ಬರಲೇ ಇಲ್ಲ. ಇದೀಗ ಕ್ರಾಂತಿ ಮೇ ತಿಂಗಳಿಗೆ ವರ್ಗಾವಣೆಯಾಗಿದೆ. ಮೇ 15ರೊಳಗೆ ರಾಜ್ಯ ರಾಜಕೀಯದಲ್ಲಿ ಮಹತ್ತರ ಬದಲಾವಣೆಗಳಾಗುತ್ತವೆ ಎಂದು ಕಾಂಗ್ರೆಸ್‌ನ ಒಳಗಿರುವ ಕೆಲವು ಅತೃಪ್ತರ ಹೇಳಿಕೆ ಮೇ ಕ್ರಾಂತಿಯ ವದಂತಿಗಳಿಗೆ ಮತ್ತೆ ಜೀವ ತುಂಬಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭವಿಷ್ಯ ಹೈಕಮಾಂಡ್ ಕೈಯಲ್ಲಿದೆ ಎಂದು ಒಬ್ಬ ಶಾಸಕ ಹೇಳಿಕೆ ನೀಡಿದ್ದರೆ, ಮೇ 15ರಂದು ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುವುದು ಖಚಿತ ಎಂಬ ಹೇಳಿಕೆಯನ್ನು ಇನ್ನೊಬ್ಬ ಶಾಸಕ ನೀಡಿದ್ದಾರೆ. ಮತ್ತೊಬ್ಬ ಶಾಸಕ ಮೇ 15ರಂದು ಸಿಹಿಸುದ್ದಿ ಬರಲಿದೆ ಎಂದು ಭವಿಷ್ಯ ನುಡಿದಿದ್ದಾರೆ. ಆದರೆ ಯಾರ ಪಾಲಿಗೆ ಅದು ಸಿಹಿ, ಯಾರ ಪಾಲಿಗೆ ಅದು ಕಹಿ ಎನ್ನುವುದನ್ನು ಅವರು ಸ್ಪಷ್ಟ ಪಡಿಸಿಲ್ಲ. ಕಾಂಗ್ರೆಸ್‌ನ ಹಿರಿಯ ನಾಯಕರೆಂದು ಕರೆಸಿಕೊಂಡ ಒಬ್ಬರು ಖರ್ಗೆಯವರನ್ನು ಮುಖ್ಯಮಂತ್ರಿ ಮಾಡಲು ತುದಿಗಾಲಿನಲ್ಲಿ ನಿಂತಿದ್ದಾರೆ. ಈ ಬಾರಿ ಮೇ ತಿಂಗಳಲ್ಲಿ ಕಾಂಗ್ರೆಸ್ ಮರದಲ್ಲಿ ಗುಲ್‌ಮೊಹರ್ ಅರಳಿಯೇ ಅರಳುತ್ತದೆ ಎಂದು ಕಾಂಗ್ರೆಸ್‌ನ ಒಂದು ಗುಂಪು ಕ್ರಾಂತಿಯ ಕನಸು ಕಾಣುತ್ತಿದೆ. ಬಿಜೆಪಿಯಂತೂ ಕಳೆದ ನವೆಂಬರ್ ತಿಂಗಳಿಂದ ಈಗ ಸರಕಾರ ಉರುಳುತ್ತದೆ, ನಾಳೆ ಸರಕಾರ ಉರುಳುತ್ತದೆ ಎಂದು ಕಾಯುತ್ತಲೇ ಇದೆ. ಆದರೆ ಇದೀಗ ಮೇ ತಿಂಗಳ ಕ್ರಾಂತಿಯ ಬಲೂನಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೂಜಿ ಚುಚ್ಚಿದ್ದಾರೆ. ರಾಜ್ಯದಲ್ಲಿ ಈಗಾಗಲೇ ಮುಖ್ಯಮಂತ್ರಿಯೊಬ್ಬರು ಇದ್ದಾರೆ. ಆದುದರಿಂದ, ಇನ್ನೊಬ್ಬ ಮುಖ್ಯಮಂತ್ರಿಯ ಅಗತ್ಯವಿಲ್ಲ. ಸದ್ಯಕ್ಕೆ ಮುಖ್ಯಮಂತ್ರಿ ಬದಲಾವಣೆಯ ಬಗ್ಗೆ ಚರ್ಚೆಯಿಲ್ಲ ಎಂದು ಸ್ಪಷ್ಟ ಪಡಿಸುವ ಮೂಲಕ ಮೇ ಕ್ರಾಂತಿಯನ್ನು ಹುಸಿ ಮಾಡಿದ್ದಾರೆ.

ಯಾವುದೇ ಕ್ರಾಂತಿಯು ಜನಪರವಾದ ಬದಲಾವಣೆಗಳಿಗೆ ಪೂರಕವಾಗಿರುತ್ತದೆ. ಆದರೆ ಇದೀಗ ರಾಜ್ಯ ಕಾಂಗ್ರೆಸ್‌ನೊಳಗೆ ನಡೆಯುತ್ತಿರುವ ಬಂಡಾಯದ ಹಿಂದೆ ಅಂತಹ ಯಾವುದೇ ಜನಪರ ಉದ್ದೇಶಗಳು ಕಾಣುತ್ತಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರಕಾರದ ಬಗ್ಗೆ ಪಕ್ಷದೊಳಗೆ ಮತ್ತು ಜನರ ನಡುವೆ ಅತೃಪ್ತಿಯದೆಯಾದರೂ, ಅವರ ಬದಲಾವಣೆಯನ್ನು ಜನರು ಕ್ರಾಂತಿಯೆಂದು ಬಗೆಯಬೇಕಾದರೆ, ಆ ಬದಲಾವಣೆಯು ನಾಡಿನ ಮೇಲೂ ಧನಾತ್ಮಕ ಪರಿಣಾಮಗಳನ್ನು ಬೀರುವಂತಿರಬೇಕು. ಪಂಚಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಗ್ರಾಮೀಣ ಜನರ ಮನದಲ್ಲಿ ಬೇರಿಳಿಸಿದ್ದಾರೆ. ಅವರ ಬದಲಾವಣೆಯು ರಾಜ್ಯದ ಅಭಿವೃದ್ಧಿಗೆ ಎಷ್ಟರಮಟ್ಟಿಗೆ ಪೂರಕವಾಗಲಿದೆ ಎನ್ನುವುದರ ಆಧಾರದಲ್ಲಿ ನಡೆಯುತ್ತಿರುವುದು ಕ್ರಾಂತಿಯೋ ಅಥವಾ ಭ್ರಾಂತಿಯೋ ಎನ್ನುವುದನ್ನು ತೀರ್ಮಾನಿಸಬಹುದಾಗಿದೆ. ಸಿದ್ದರಾಮಯ್ಯ ಅವರು ಈ ಹಿಂದಿನ ನಿಷ್ಠುರತೆಯನ್ನು ಕಳೆದುಕೊಂಡಿದ್ದಾರೆ ಎನ್ನುವುದೇನೋ ನಿಜ. ದಿನದಿಂದ ದಿನಕ್ಕೆ ಅವರು ಸರಕಾರದೊಳಗೆ ಅಸಹಾಯಕರಾಗುತ್ತಿದ್ದಾರೆ. ಆದರೆ ಈಗಲೂ ರಾಜ್ಯ ಕಾಂಗ್ರೆಸ್ ನಿಂತಿರುವುದು ಸಿದ್ದರಾಮಯ್ಯ ಹೆಸರಿನಲ್ಲೇ ಎನ್ನುವುದರಲ್ಲಿ ಅನುಮಾನವಿಲ್ಲ. ಸಿದ್ದರಾಮಯ್ಯ ಅವರನ್ನು ಬದಲಿಸಬೇಕಾದರೆ ಸ್ಪಷ್ಟ ಕಾರಣಗಳನ್ನು ಹೈಕಮಾಂಡ್ ನೀಡಬೇಕಾಗುತ್ತದೆ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಪೂರ್ಣಪ್ರಮಾಣದಲ್ಲಿ ವಿಫಲರಾಗಿದ್ದಾರೆ ಎನ್ನುವ ಆರೋಪಗಳಿದ್ದಾಗ ಬದಲಾವಣೆ ಅನಿವಾರ್ಯವಾಗುತ್ತದೆ. ಆದರೆ ಅಂತಹ ದೂರುಗಳು ಅವರ ಮೇಲಿಲ್ಲ. ಕಾಂಗ್ರೆಸ್‌ನ ಕೆಲವು ನಾಯಕರ ವೈಯಕ್ತಿಕ ಅಗತ್ಯಕ್ಕಾಗಿ ಮುಖ್ಯಮಂತ್ರಿಯನ್ನು ಬದಲಿಸುವುದು ಎಷ್ಟು ಸರಿ? ಎನ್ನುವ ಪ್ರಶ್ನೆ ಏಳುತ್ತದೆ. ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಬೇಕಾದರೆ ಅವರಿಗಿಂತ ಹೆಚ್ಚು ಅರ್ಹರನ್ನು ಆ ಪದವಿಗೆ ಏರಿಸಬೇಕಾಗುತ್ತದೆ. ಸಿದ್ದರಾಮಯ್ಯ ಅವರನ್ನು ಬದಲಿಸುವುದಾದರೆ ಮಲ್ಲಿಕಾರ್ಜುನ ಖರ್ಗೆ ಮುಖ್ಯಮಂತ್ರಿಯಾಗಲಿ ಎಂದು ಒಂದು ಗುಂಪು ಪ್ರತಿಪಾದಿಸುತ್ತಿದೆ. ಖರ್ಗೆ ಹೆಸರು ಮುನ್ನೆಲೆಗೆ ಬಂದಿರುವುದೇ ಸಿದ್ದರಾಮಯ್ಯ ಬದಲಾವಣೆಯ ಲಾಭ ಡಿ.ಕೆ. ಶಿವಕುಮಾರ್‌ಗೆ ಸಿಗದಿರಲಿ ಎನ್ನುವ ಕಾರಣಕ್ಕೆ. ಇದೀಗ ಎಲ್ಲದಕ್ಕೂ ಖರ್ಗೆಯವರೇ ಉತ್ತರಿಸಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದು ಅವರು ಸ್ಪಷ್ಟಪಡಿಸಿರುವುದರಿಂದ, ತಾನು ಮುಖ್ಯಮಂತ್ರಿ ಹುದ್ದೆಗೆ ಸ್ಪರ್ಧಿಯಲ್ಲ ಎಂದು ಸ್ಪಷ್ಟಪಡಿಸಿದಂತಾಗಿದೆ. ಜೊತೆಗೇ ಸಿದ್ದರಾಮಯ್ಯ ಅವರನ್ನು ಬದಲಿಸುವ ಉದ್ದೇಶವನ್ನು ವರಿಷ್ಠರು ಹೊಂದಿಲ್ಲ ಎನ್ನುವುದನ್ನು ಮನವರಿಕೆ ಮಾಡಿಸಿದ್ದಾರೆ.

ದಾವಣಗೆರೆ ಉಪಚುನಾವಣೆಯ ಬಳಿಕ ರಾಜ್ಯ ಕಾಂಗ್ರೆಸ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯ ತೀವ್ರ ಅಸಮಾಧಾನವನ್ನು ಹೊಂದಿರುವುದು ಕೇಂದ್ರ ವರಿಷ್ಠರ ಗಮನಕ್ಕೂ ಬಂದಂತಿದೆ. ಸಿದ್ದರಾಮಯ್ಯ ಅವರನ್ನು ಇಳಿಸಿ ಡಿ.ಕೆ. ಶಿವಕುಮಾರ್ ಅವರನ್ನು ಆ ಸ್ಥಾನಕ್ಕೇರಿಸುವುದು ಕಾಂಗ್ರೆಸ್ ಪಾಲಿಗೆ ಇನ್ನಷ್ಟು ಸಮಸ್ಯೆಯನ್ನು ಸೃಷ್ಟಿಸಬಹುದು ಎನ್ನುವುದು ಅವರಿಗೆ ಅರ್ಥವಾದಂತಿದೆ. ಆದುದರಿಂದಲೇ ನಾಯಕತ್ವ ಬದಲಾವಣೆ ಸದ್ಯಕ್ಕಿಲ್ಲ ಎಂದಿದ್ದಾರೆ. ಇದೇ ಸಂದರ್ಭದಲ್ಲಿ ಡಿ. ಕೆ. ಶಿವಕುಮಾರ್ ಅವರು ಉಪಮುಖ್ಯಮಂತ್ರಿ ಸ್ಥಾನ ಅಥವಾ ಕೆಪಿಸಿಸಿ ಸ್ಥಾನಗಳಲ್ಲಿ ಒಂದನ್ನು ಕೈ ಬಿಡಬೇಕು ಎನ್ನುವ ಒತ್ತಡವೂ ಹೆಚ್ಚುತ್ತಿದೆ ಅಥವಾ ಡಿ.ಕೆ. ಶಿವಕುಮಾರ್ ಜೊತೆಗೆ ಇನ್ನೋರ್ವ ದಲಿತ ನಾಯಕನನ್ನು ಉಪಮುಖ್ಯಮಂತ್ರಿಯಾಗಿಸಬೇಕು ಎಂದು ಒಂದು ಗುಂಪು ಆಗ್ರಹಿಸುತ್ತಿದೆ. ಇವೆರಡಕ್ಕೂ ಶಿವಕುಮಾರ್ ಅವಕಾಶ ನೀಡುತ್ತಿಲ್ಲ ಎನ್ನಲಾಗುತ್ತಿದೆ. ಜೊತೆಗೆ ಸಂಪುಟ ಪುನಾರಚನೆಗೂ ಡಿ.ಕೆ.ಶಿವಕುಮಾರ್ ಹಸ್ತಕ್ಷೇಪ ಸಮಸ್ಯೆಯಾಗುತ್ತಿದೆ. ತನ್ನನ್ನು ಮುಖ್ಯಮಂತ್ರಿ ಮಾಡಲಾಗುವುದಿಲ್ಲ ಎಂದಾದರೆ ತಾನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಇಳಿಯುವುದಿಲ್ಲ ಎಂದು ಅವರು ಹಟ ಹಿಡಿದಂತಿದೆ. ಜೊತೆಗೆ ಸಂಪುಟಕ್ಕೆ ಯಾರನ್ನು ಸೇರಿಸಬೇಕು, ಬೇಡ ಎನ್ನುವ ವಿಷಯದಲ್ಲೂ ಅವರು ನೇರ ಹಸ್ತಕ್ಷೇಪ ನಡೆಸುತ್ತಿದ್ದಾರೆ ಎನ್ನುವ ಆರೋಪಗಳಿವೆ.

ವರಿಷ್ಠರು ಉಪಚುನಾವಣೆಯ ಫಲಿತಾಂಶದ ನಿರೀಕ್ಷೆಯಲ್ಲಿದ್ದಾರೆ. ದಾವಣಗೆರೆಯಲ್ಲಿ ಕಾಂಗ್ರೆಸ್‌ಗೇನಾದರೂ ಸೋಲಾದರೆ ಅದು ರಾಜ್ಯ ಕಾಂಗ್ರೆಸ್‌ನಲ್ಲಿ ಸಾಕಷ್ಟು ಬದಲಾವಣೆಗಳಿಗೆ ಕಾರಣವಾಗಲಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಮೇ ಕ್ರಾಂತಿಯ ಬೀಜ ದಾವಣಗೆರೆ ಫಲಿತಾಂಶದಲ್ಲಿದೆ ಎನ್ನುವುದು ಬಹುತೇಕ ನಾಯಕರ ಅಂಬೋಣ. ಆದುದರಿಂದ ಕಾಂಗ್ರೆಸ್‌ನೊಳಗೆ ಕ್ರಾಂತಿ ನಡೆಯುವುದೇ ಆಗಿದ್ದರೆ ಅದರ ನಿಜ ವಾರಸುದಾರರು ದಾವಣಗೆರೆಯ ಮತದಾರರಾಗಿದ್ದಾರೆ. ಅವರೇನಾದರೂ ಕಾಂಗ್ರೆಸ್‌ನ ಕುಟುಂಬ, ಜಾತಿ ರಾಜಕಾರಣಕ್ಕೆ ಪಾಠ ಕಲಿಸಲು ತೀರ್ಮಾನಿಸಿದ್ದರೆ, ಕಾಂಗ್ರೆಸ್ ಗಿಡದಲ್ಲಿ ಗುಲ್‌ಮೊಹರ್ ಅರಳುವುದರಲ್ಲಿ ಅನುಮಾನವಿಲ್ಲ. ಕಾಂಗ್ರೆಸ್‌ನೊಳಗಿನ ಹಲವು ನಾಯಕರ ಜಾತಿ ಪ್ರತಿಷ್ಠೆಗೆ, ದುರಹಂಕಾರಗಳಿಗೆ, ಸರ್ವಾಧಿಕಾರಿ ಮನಸ್ಥಿತಿಗೆ ಆ ಕ್ರಾಂತಿಯು ಪಾಠ ಕಲಿಸಬಹುದು. ಕಾಂಗ್ರೆಸ್‌ನೊಳಗಿನ ರಾಜ್ಯ ನಾಯಕರ ಆತ್ಮವಿಮರ್ಶೆಗೆ ಆ ಕ್ರಾಂತಿಯೇ ನಿಮಿತ್ತವಾಗಬಹುದು.

ಎನ್‌ಡಿಎ ಗೆಲುವಿಗೆ ಮೋದಿ ನಾಯಕತ್ವ ಕಾರಣ ; ಚಂದ್ರಬಾಬು ನಾಯ್ಡು



ಅಮರಾವತಿ, ಮೇ 4 (ಪಿಟಿಐ) ಇಂದು ನಡೆದ ಕೆಲವು ರಾಜ್ಯ ಚುನಾವಣೆಗಳಲ್ಲಿ ಎನ್‌ಡಿಎ ಗೆಲುವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಮತ್ತು ವಿಕಸಿತ್ ಭಾರತ (ಅಭಿವೃದ್ಧಿ ಹೊಂದಿದ ಭಾರತ)ದ ದೃಷ್ಟಿಕೋನದಲ್ಲಿ ಜನರ ನಿರಂತರ ಮತ್ತು ಬೆಳೆಯುತ್ತಿ ರುವ ವಿಶ್ವಾಸವನ್ನು ಪ್ರತಿಬಿಂ ಬಿಸುತ್ತದೆ ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ಎನ್‌ಡಿಎಯ ಇಂದಿನ ಗೆಲುವು ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಜಿ ಅವರ ನಾಯಕತ್ವ ಮತ್ತು ವಿಕಸಿತ್ ಭಾರತಕ್ಕಾಗಿ ಅವರ ದೃಷ್ಟಿಕೋನದಲ್ಲಿ ಜನರ ನಿರಂತರ ಮತ್ತು ಬೆಳೆಯುತ್ತಿರುವ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ನಾಯ್ಡು ಎಕ್ಸ್ ಮಾಡಿದ್ದಾರೆ.

ಈ ಚುನಾವಣಾ ಫಲಿತಾಂಶಗಳು ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್ ಎಂಬ ಮನೋಭಾವದಿಂದ ಮಾರ್ಗದರ್ಶಿಸಲ್ಪಟ್ಟ ಜನರ ಆಕಾಂಕ್ಷೆಗಳ ಸಂಗಮವಾಗಿ ಎನ್‌ಡಿಎಯನ್ನು ಬಲಪಡಿಸುತ್ತದೆ. ಈ ಫಲಿತಾಂಶದೊಂದಿಗೆ ವಿಕಸಿತ್ ಭಾರತದತ್ತ ಪ್ರಯಾಣವು ಮತ್ತಷ್ಟು ಬಲವನ್ನು ಪಡೆದುಕೊಂಡಿದೆ ಎಂದು ಅವರು ಹೇಳಿದರು.

ಅಭಿವೃದ್ಧಿಯತ್ತ ಎನ್‌ಡಿಎಯ ದೃಢ ಬದ್ಧತೆಯ ಬಗ್ಗೆ ಜನರ ನಂಬಿಕೆ ಮತ್ತು ಬೆಂಬಲ ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ನಾಯ್ಡು ಹೇಳಿದರು. ಯಂಗ್ ಇಂಡಿಯಾ ವಿಶ್ವಾಸಾರ್ಹತೆ, ಅಭಿವೃದ್ಧಿ ಮತ್ತು ನಾಗರಿಕರೊಂದಿಗೆ ನಿಜವಾದ ಸಂಪರ್ಕವನ್ನು ಗೌರವಿಸುತ್ತದೆ ಎಂಬ ಸಂದೇಶ ಇದು ಎಲ್ಲಾ ರಾಜಕೀಯ ಪಕ್ಷಗಳಿಗೂ ಇದೆ ಎಂದು ಅವರು ಹೇಳಿದರು.

ಈ ಐತಿಹಾಸಿಕ ಜನಾದೇಶಕ್ಕಾಗಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ಎಲ್ಲಾ ಎನ್‌ಡಿಎ ವಿಜೇತರು, ಸಮರ್ಪಿತ ಕಾರ್ಯಕರ್ತರು (ಪಕ್ಷದ ಕಾರ್ಯಕರ್ತರು) ಮತ್ತು ಜನರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ನಾಯ್ಡು ಹೇಳಿದರು.

ತಮಿಳುನಾಡಿನಲ್ಲಿ ರಾಜಕೀಯಕ್ಕೂ ಚಿತ್ರರಂಗಕ್ಕೂ ಬಿಡದ ನಂಟು

ಬೆಂಗಳೂರು, ಮೇ4-ಪಂಚರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶಗಳು ಪ್ರಕಟವಾಗುತ್ತಿದ್ದು, ತಮಿಳುನಾಡಿನಲ್ಲಿ ನಟ ದಳಪತಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವು ಅಧಿಕಾರದ ಹೊಸ್ತಿಲಿಗೆ ಬಂದು ನಿಂತಿದೆ.

ಅತ್ಯಲ್ಪ ಕಾಲದಲ್ಲಿ ರಾಜಕೀಯ ಪಕ್ಷ ಸ್ಥಾಪಿಸಿ ಅಧಿಕಾರ ಗದ್ದುಗೆ ಏರಿದ ಅಪೂರ್ವ ಉದಾಹರಣೆ ಇದಾಗಿದ್ದು, ಎಂಜಿಆರ್, ಜಯಲಲಿತಾ, ಎನ್‌ಟಿಆರ್ ನಂತರ ದಕ್ಷಿಣ ಭಾರತದಲ್ಲಿ ಚಲನಚಿತ್ರ ನಟರೊಬ್ಬರು ಮಾಡಿ ಕಮಾಲ್ ಆಗಿದೆ.

ಆಧುನಿಕ ತಮಿಳುನಾಡಿನ ಇತಿಹಾಸವನ್ನೊಮೆ ಅವಲೋಕಿಸಿದರೆ, ಹೆಚ್ಚಿನ ಅವಧಿಗೆ ಚಿತ್ರರಂಗದವರೇ ಆಡಳಿತ ನಡೆಸಿರುವುದು ಗೋಚರಿಸುತ್ತದೆ. ಅಣ್ಣಾದೊರೈ ಅವರಿಂದ ಆರಂಭವಾದ ಈ ಪ್ರವೃತ್ತಿ ಆನಂತರ ಎಂಜಿಆರ್, ಕರುಣಾನಿಧಿ, ಜಯಲಲಿತಾ ಅವರ ಕಾಲಕ್ಕೂ ಮುಂದುವರೆದಿದ್ದು, ಈಗ ಜನಪ್ರಿಯ ತಮಿಳುನಟ ದಳಪತಿ ವಿಜಯ್ ಅವರು ಈ ಪರಂಪರೆಯನ್ನು ಮುಂದುವರೆಸಿದ್ದಾರೆ.

ಎದುರಾಳಿಗಳನ್ನು ಧೂಳಿಪಟವಾಗಿಸಿ ಪಕ್ಷವನ್ನು ಸರಳ ಬಹುಮತದತ್ತ ಮುನ್ನಡೆಸಿರುವ ವಿಜಯ್ ರಾಜಕೀಯ ವಿಸಯ ಮೂಡಿಸಿದ್ದಾರೆ. ಬಹುಮತಕ್ಕೆ ಒಂದೆರಡು ಸ್ಥಾನ ಕೊರತೆಯಿರುವ ವಿಜಯ್ ಅವರು ತಮ ಪಕ್ಷ ಯಾರದೇ ಬೆಂಬಲ ಇಲ್ಲದೇ ಸ್ವಂತ ಬಲದ ಮೇಲೆ ಸರಕಾರ ರಚಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ತಮಿಳುನಾಡಿನ ಜನತೆ ಭಾಷಾಭಿಮಾನಿಗಳು ಮತ್ತು ಕಲಾಭಿಮಾನಿಗಳು. ಚಲನಚಿತ್ರರಂಗದವರ ಮೇಲೆ ಅವರಿಗೆ ಅಪಾರ ಒಲವು. ಹೀಗಾಗಿ ಈ ಬಾರಿ ತಮಿಳುನಾಡಿನ ಮತದಾರ ವಿಜಯರತ್ತ ಒಲವು ತೋರಿದ್ದಾರೆ.

ಮಕ್ಕಳ್ ತಿಲಕಂ ಎಂದೇ ಖ್ಯಾತರಾಗಿರುವ ಎಂಜಿ ರಾಮಚಂದ್ರನ್‌ರವರು ಏಳು ವರ್ಷಗಳ ಕಾಲ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದರು. ಜನಮನದ ಗದ್ದುಗೆಯಿಂದ ರಾಜಕೀಯ ಗದ್ದುಗೆ ಏರಿ ದಕ್ಷಿಣ ಭಾರತದಲ್ಲಿ ನಟರೊಬ್ಬರು ಪ್ರಥಮ ಬಾರಿ ರಾಜ್ಯವೊಂದರ ಮುಖ್ಯಮಂತ್ರಿಯಾದ ಸಾಧನೆ ಮಾಡಿದರು.



ತರುವಾಯ ಅವರ ಎಐಎಡಿಎಂಕೆ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದುಕೊಂಡು ಎಂಜಿಆರ್ ಅವರ ಉತ್ತರಾಧಿಕಾರಿಯಾಗಿ ಗುರುತಿಸಿಕೊಂಡ ಹೆಸರಾಂತ ಚಲನಚಿತ್ರ ಕಲಾವಿದೆ ಜೆ. ಜಯಲಲಿತಾ ಅವರು ಮೂರು ಬಾರಿ ತಮಿಳುನಾಡಿನ ಅಧಿಕಾರದ ಚುಕ್ಕಾಣಿ ಹಿಡಿದರು.

ಮಾಜಿ ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರೂ ಕೂಡ ಚಲನಚಿತ್ರರಂಗದ ಕಥಾ ಲೇಖಕರೂ ಮತ್ತು ಚಿತ್ರ ಸಾಹಿತಿಯಾಗಿ ಗುರುತಿಸಿಕೊಂಡವರು. ಕರುಣಾನಿಧಿ ಅವರೂ ಮೂರು ಬಾರಿ ತಮಿಳುನಾಡಿನ ಆಡಳಿತದ ನೇತೃತ್ವ ವಹಿಸಿಕೊಂಡರು.

ತದನಂತರದ ದಿನಗಳಲ್ಲಿ ಕಮಲ್‌ಹಾಸನ್ ಅವರು ರಾಜಕೀಯ ಪ್ರವೇಶಿಸಿದರು. ಆದರೆ ಅವರ ಮಕ್ಕಲ್ ನೀಧಿ ಮಯ್ಯಂ ಪಕ್ಷ ಅಷ್ಟಾಗಿ ರಾಜಕೀಯ ಮುನ್ನಡೆ ಕಾಣಲಿಲ್ಲ. ಕಳೆದ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಿದ ಕಮಲ್ ಸ್ವತಃ ಸೋಲು ಕಂಡರು.

ಸೂಪರ್ ಸ್ಟಾರ್ ರಜನಿಕಾಂತ್ ಅವರ ರಾಜಕೀಯ ಪ್ರವೇಶದ ಬಗ್ಗೆ ಸುದ್ದಿಗಳು ಹರಿದಾಡುತ್ತಲೇ ಇದ್ದವು, ಆದರೆ, ಆರೋಗ್ಯದ ಕಾರಣ ನೀಡಿ ರಜನಿಕಾಂತ್ ರಾಜಕೀಯ ಪ್ರವೇಶ ನಿರಾಕರಿಸಿದರು.

ಈಗ ಅಧಿಕಾರ ಗದ್ದುಗೆಯ ಸನಿಹ ಇರುವ ದಳಪತಿ ವಿಜಯ್ ಎಂಜಿಆರ್, ಜಯಲಲಿತಾ ಅವರು ಸೃಷ್ಟಿಸಿದ ಶೂನ್ಯವನ್ನು ತುಂಬಿದ್ದಾರೆ. ತಮಿಳುನಾಡಿನ ನೂತನ ನಾಯಕರಾಗಿ ಹೊರಹೊಮಿದ್ದಾರೆ.

ಕೇರಳ ಚುನಾವಣೆ: ದೇಶದಲ್ಲಿಯೇ ಎಡಪಕ್ಷದ ಅಂತ್ಯ, ಮುನ್ನಡೆ ಸಾಧಿಸಿದ ಯುಡಿಎಫ್

ತಿರುವನಂತಪುರಂ (ಕೇರಳ): ಎಪ್ರಿಲ್ 9 ರಂದು ನಡೆದ ವಿಧಾನಸಭಾ ಚುನಾವಣೆಯ ಮತ ಎಣಿಕೆ ವೇಗ ಪಡೆದುಕೊಂಡಿದೆ. ಸೋಮವಾರ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಭರ್ಜರಿ ಮುನ್ನಡೆ ಸಾಧಿಸುವ ಮೂಲಕ ಎಲ್‌ಡಿಎಫ್ ಸರ್ಕಾರವನ್ನು ಸೋಲಿಸಿದೆ. ಈ ಮೂಲಕ ಕೇರಳದಲ್ಲಿ ಮಾತ್ರವೇ ಅಸ್ತಿತ್ವದಲ್ಲಿದ್ದ ಕಮ್ಯೂನಿಸ್ಟ್ ಸರ್ಕಾರ ಅಂತ್ಯವಾಗಿದೆ.



ಎಕ್ಸಿಟ್ ಪೋಲ್ ಮುನ್ಸೂಚನೆಗಳಿಗೆ ಅನುಗುಣವಾಗಿ ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಸ್ಪಷ್ಟ ಮುನ್ನಡೆ ಸಿಗುವ ಮುನ್ಸೂಚನೆ ಆರಂಭಿಕ ಟ್ರೆಂಡ್‌ಗಳಿಂದ ತಿಳಿದುಬಂದಿದೆ.

ಮೊದಲ ಕೆಲವು ಸುತ್ತಿನ ಎಣಿಕೆಯ ನಂತರ, ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ 140 ವಿಧಾನಸಭಾ ಸ್ಥಾನಗಳ ಪೈಕಿ 100 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದ್ದರೆ, ಸಿಪಿಐ(ಎಂ) ನೇತೃತ್ವದ ಆಡಳಿತಾರೂಢ ಎಡ ಡೆಮಾಕ್ರಟಿಕ್ ಫ್ರಂಟ್ (ಎಲ್‌ಡಿಎಫ್) ಕೇವಲ 40 ಕ್ಷೇತ್ರಗಳಲ್ಲಿ ಮಾತ್ರ ಮುಂದಿತ್ತು.

ಇದೀಗ ಯುಡಿಎಫ್‌ಗೆ 99, ಎಲ್‌ಡಿಎಫ್‌ಗೆ 38, ಹಾಗೂ ಎನ್‌ಡಿಎ 3 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ.

ಈ ಫಲಿತಾಂಶ ಆಡಳಿತ ಪಕ್ಷಕ್ಕೆ ಹಿನ್ನಡೆಯನ್ನು ಸೂಚಿಸುತ್ತದೆ. ಕನಿಷ್ಠ ಒಂದು ಡಜನ್ ಸಚಿವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹಿನ್ನಡೆ ಅನುಭವಿಸಿದ್ದಾರೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕಣ್ಣೂರು ಜಿಲ್ಲೆಯಲ್ಲಿ ತಮ್ಮ ಸಾಂಪ್ರದಾಯಿಕ ಭದ್ರಕೋಟೆಯಾದ ಧರ್ಮಡಂನಲ್ಲಿ ಆರಂಭಿಕ ಸುತ್ತುಗಳಲ್ಲಿಯೇ ಹಿಂದುಳಿದಿದ್ದರು.

ಆರಂಭಿಕ ಸೋಲನ್ನು ಎದುರಿಸುತ್ತಿರುವ ಇತರೆ ಸಚಿವರಲ್ಲಿ ವೀಣಾ ಜಾರ್ಜ್, ಎಂ. ಬಿ. ರಾಜೇಶ್, ಒ. ಆರ್. ಕೇಲು, ಆರ್ ಬಿಂಧು, ಜೆ. ಚಿಂಚುರಾಣಿ, ಪಿ. ರಾಜೀವ್, ಕೆ. ಬಿ. ಗಣೇಶ್ ಕುಮಾ,ರ್ ವಿ. ಎನ್. ವಾಸವನ್, ವಿ. ಶಿವನ್‌ಕುಟ್ಟಿ, ವಿ ಅಬ್ದುರಹಿಮಾನ್, ಕಾಡನ್ನಪ್ಪಲ್ಲಿ ರಾಮಚಂದ್ರನ್, ಎ. ಕೆ. ಸಸೀಂದ್ರನ್ ಮತ್ತು ರೋಶಿ ಆಗಸ್ಟಿನ್ ಸೇರಿದ್ದಾರೆ.

ದೂರದರ್ಶನ ವರದಿಗಳ ಪ್ರಕಾರ, ಎಲ್‌ಡಿಎಫ್ ಸಂಚಾಲಕ ಟಿ. ಪಿ. ರಾಮಕೃಷ್ಣನ್ ಅವರು ಕೋಝಿಕ್ಕೋಡ್ ಜಿಲ್ಲೆಯ ತಮ್ಮ ಹಾಲಿ ಕ್ಷೇತ್ರ ಪೆರಂಬ್ರಾದಲ್ಲಿ ಹಿನ್ನಡೆ ಅನುಭವಿಸಿದ್ದಾರೆ.

ವಿಜಯನ್ ನೇತೃತ್ವದಲ್ಲಿ ಸತತ ಎರಡು ಅವಧಿಗೆ ಅಧಿಕಾರದಲ್ಲಿರುವ ಸಿಪಿಐ(ಎಂ) ನೇತೃತ್ವದ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಮಹತ್ವದ ಪಾತ್ರ ವಹಿಸಿದೆ.

ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ಆರೋಪಗಳ ಬಗ್ಗೆ ವಿರೋಧ ಪಕ್ಷಗಳಿಂದ ಪದೇ ಪದೇ ಆರೋಪಗಳು ಕೇಳಿ ಬರುತ್ತಿದ್ದರಿಂದಾಗಿ, ಹಲವಾರು ಕ್ಷೇತ್ರಗಳ ಮತದಾರರು ಹಾಲಿ ಆಡಳಿತದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವುದು ಇದರಿಂದ ತಿಳಿದುಬರುತ್ತಿದೆ.

ಕೇರಳದ ಚುನಾವಣಾ ರಾಜಕೀಯದಲ್ಲಿ ಸಾಂಪ್ರದಾಯಿಕವಾಗಿ ನಿರ್ಣಾಯಕ ಪಕ್ಷವಾಗಿ ಕಾರ್ಯನಿರ್ವಹಿಸುವ ಅನೇಕ ಪ್ರದೇಶಗಳಲ್ಲಿ ಅಲ್ಪಸಂಖ್ಯಾತ ಮತಗಳ ಕ್ರೋಢೀಕರಣದಿಂದ ಯುಡಿಎಫ್ ಪ್ರಯೋಜನ ಪಡೆದಿರುವುದು ಫಲಿತಾಂಶದಲ್ಲಿ ಕಂಡುಬರುತ್ತಿದೆ.

ಗಮನಾರ್ಹ ಬೆಳವಣಿಗೆಯೊಂದರಲ್ಲಿ, ಸಿಪಿಐ(ಎಂ) ಅಭ್ಯರ್ಥಿ ಇ. ಟಿ. ಟೈಸನ್ ಆರಂಭಿಕ ಮುನ್ನಡೆ ಸಾಧಿಸಿದ್ದ ಉತ್ತರ ಪರವೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಹಿರಿಯ ಮತ್ತು ವಿರೋಧ ಪಕ್ಷದ ನಾಯಕ ವಿ.ಡಿ. ಸತೀಸನ್ ಹಿನ್ನಡೆಯಲ್ಲಿದ್ದಾರೆ. ಅದಾಗ್ಯೂ, ರಾಷ್ಟ್ರೀಯ ಪಕ್ಷಕ್ಕೆ ಅನುಕೂಲಕರವಾದ ಕ್ಷೇತ್ರಗಳಲ್ಲಿ ಎಣಿಕೆ ಮುಂದುವರೆದಂತೆ ಸತೀಸನ್ ಚೇತರಿಕೆ ಕಂಡಿದ್ದಾರೆ.

ವಿಕಸಿತ ಭಾರತಕ್ಕಾಗಿ ಜನ ಬೆಂಬಲ : ಎನ್‌ಡಿಎ ಮೈತ್ರಿಕೂಟಕ್ಕೆ ಗೆಲುವು ಕುರಿತು ಹೆಚ್ಡಿಕೆ ಪ್ರತಿಕ್ರಿಯೆ

ಬೆಂಗಳೂರು, ಮೇ 4- ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಅಭೂತಪೂರ್ವ ಗೆಲುವು ಸಾಧಿಸಿರುವುದು ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ವಿಕಸಿತ ಭಾರತಕ್ಕಾಗಿ ಅವರ ಪರಿವರ್ತನಾಪ್ರೇರಿತ ಕಾರ್ಯಸೂಚಿಯಲ್ಲಿ ಜನರು ಹೊಂದಿರುವ ನಿರಂತರ ನಂಬಿಕೆಯ ದೃಢೀಕೃತ ಫಲಿತಾಂಶವಾಗಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಣ್ಣಿಸಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಈ ನಿರ್ಣಾಯಕ ಜನಾದೇಶವು ಜನರ ಆಕಾಂಕ್ಷೆಗಳು ಮತ್ತು ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್‌ನ ಮಾರ್ಗದರ್ಶಿ ತತ್ವಗಳ ನಡುವಿನ



ಆಳವಾದ ಹೊಂದಾಣಿಕೆಯನ್ನು ಪ್ರತಿಬಿಂಬಿಸುತ್ತದೆ. ಇದು ಎನ್‌ಡಿಎ ಮೈತ್ರಿಕೂಟದ ವಿಶ್ವಾಸಾರ್ಹತೆ, ಕಾರ್ಯಕ್ಷಮತೆ ಮತ್ತು ಅಂತರ್ಗತ ಆಡಳಿತದ ವೇದಿಕೆಯಾಗಿ ಬಲಪಡಿಸುತ್ತದೆ ಎಂದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕಾರ್ಯತಂತ್ರದ ನಾಯಕತ್ವ ಮತ್ತು ರಾಷ್ಟ್ರೀಯ ಏಕತೆಗೆ ಅಚಲ ಬದ್ಧತೆಯು ಈ ಫಲಿತಾಂಶವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ದೇಶಾದ್ಯಂತ ಎನ್‌ಡಿಎಯ ವ್ಯಾಪ್ತಿ ಮತ್ತು ಸಾಂಸ್ಥಿಕ ಆಳವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್‌ನಬಿನ್‌ಅವರು ಸಂಘಟನೆಯನ್ನು ಚೈತನ್ಯಗೊಳಿಸುವ ಮತ್ತು ಕಾರ್ಯಕರ್ತರೊಂದಿಗೆ ಸಂಪರ್ಕ ಸಾಧಿಸುವ ಪ್ರಯತ್ನಗಳು ಸಹ ಈ ಮಹತ್ವದ ಜನಾದೇಶಕ್ಕೆ ಕಾರಣವಾಗಿವೆ. ಈ ಐತಿಹಾಸಿಕ ಜನಾದೇಶಕ್ಕಾಗಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಹಾಗೂ ಎಲ್ಲಾ ಎನ್‌ಡಿಎ ವಿಜೇತರು, ಸಮರ್ಪಿತ ಕಾರ್ಯಕರ್ತರು ಮತ್ತು ಜನತೆಗೆ ನನ್ನ ಪ್ರಾಮಾಣಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಸಿರುಗುಪ್ಪ : 1.36 ಲಕ್ಷ ರೂ ಮೌಲ್ಯದ ಅಕ್ರಮ ಪಡಿತರ ಅಕ್ಕಿ ವಶ

ಸಿರುಗುಪ್ಪ - ತಾಲೂಕಿನಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಣೆ ಮಾಡುತ್ತಿದ್ದ ವಾಹನಗಳನ್ನು ಆಹಾರ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ವಶಪಡಿಸಿಕೊಂಡ ಘಟನೆ ಭಾನುವಾರ ನಡೆದಿದೆ ಖಚಿತ ಮಾಹಿತಿ ಮೇರೆಗೆ ಸಿರುಗುಪ್ಪ ಆಹಾರ ನಿರೀಕ್ಷಕ ವಿಜಯಕುಮಾರ್ ನೇತೃತ್ವದ ತಂಡ ದಾಳಿ ನಡೆಸಿ ತೆಕ್ಕಲಕೋಟೆಯಿಂದ ಸಿರುಗುಪ್ಪ ಮಾರ್ಗವಾಗಿ 35 ರಿಂದ 40 ಕೆಜಿ ತೂಕದ 50 ಚೀಲಗಳಲ್ಲಿ 48,500 ರೂ ಮೌಲ್ಯದ ಪಡಿತರ ಅಕ್ಕಿ ಹಾಗೂ



ಬಂಡ್ರಾಳ ಗ್ರಾಮದಿಂದ ಸಿಂಧನೂರು ಕಡೆಗೆ ಗೂಡ್ಸ್ ವಾಹನದಲ್ಲಿ 35 ರಿಂದ 40 ಕೆಜಿ ತೂಕದ 90 ಚೀಲಗಳಲ್ಲಿ 87, 250 ರೂ ಸೇರಿದಂತೆ ಒಟ್ಟು 1,35,750 ರೂ ಮೌಲ್ಯದ ಪಡಿತರ ಅಕ್ಕಿಯನ್ನು ವಶಕ್ಕೆ ಪಡಿಸಿಕೊಳ್ಳಲಾಗಿದೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಹನ ಚಾಲಕರಾದ ಮಹೇಶ್ ಹಾಗೂ ರಜಾಕ್ ಅಲಿ ಅವರ ವಿರುದ್ಧ ಸಿರುಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ .

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR